ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು-560 011

45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ 2018-2019ನೇ ಸಾಲಿನ 45ನೆಯ ವಾರ್ಷಿಕ ಸರ್ವಸದಸ್ಯರ ಸಭೆಯು **ದಿನಾಂಕ 22-09-2019ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ಶ್ರೀ ಕೆ. ಆರ್. ಮರುದೇವಗೌಡ ರಂಗಮಂದಿರ,** ಭಾರತ್ ವಿದ್ಯಾ ಸಂಸ್ಥೆ ಆವರಣ, 16ನೇ ಮುಖ್ಯ ರಸ್ತೆ, 4ನೇ ವಿಭಾಗ, ಜಯನಗರ, ಬೆಂಗಳೂರು-560 011. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಡಾ|| ಎಂ.ಸಿ. ಜಗತ್** ಇವರ ಅಧ್ಯಕ್ಷತೆಯಲ್ಲಿ ಕಾರ್ಯಸೂಚಿಯಲ್ಲಿ ನಮೂದಿಸಿರುವ ಕಾರ್ಯ ಕಲಾಪಗಳನ್ನು ನಡೆಸುವುದಕ್ಕಾಗಿ ಸೇರಲಿದೆ. ಸದಸ್ಯರು ದಯಮಾಡಿಸಿ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥನೆ.

ಕಾರ್ಯಸೂಚಿ

		ಪುಟ ಸಂಖ್ಯೆ
1.	ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು.	1
2.	ದಿನಾಂಕ 23-09-2018ರಂದು ನಡೆದ ಬ್ಯಾಂಕಿನ 44ನೇ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.	5-23
3.	2018-19ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ.	24-36
4.	2018-19ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.	43-162
5.	2018-19ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.	33
6.	2018-19ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.	37-39
7.	2020-21ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು.	37-40
8.	2019-20ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.	
9.	ಕರ್ನಾಟಕ ಸಹಕಾರ ಕಾಯ್ದೆ ನಿಯಮಗಳ ಅನುಸಾರವಾಗಿ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾ ತಿದ್ದುಪಡಿಗಳನ್ನು ಅನುಮೋದಿಸುವುದು.	42
10.	2019-20ನೇ ಸಾಲಿನ ಕಾರ್ಯಕ್ರಮದ ಪರಿಗಣನೆ.	36
11.	ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ.	
12.	ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ.	29
13.	ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು	

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಡಿ.ಎ. ಅಮೃತ
ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 22-08-2019

ಸೂಚನೆಗಳು

1. ಸದಸ್ಯರು ಸಭಾ ಭವನದಲ್ಲಿ ಕೂಡುವುದಕ್ಕೆ ಮುಂಚೆ ದಯಮಾಡಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ. ಹಾಗೂ ವಿಳಾಸ ಬದಲಾವಣೆ ಇದ್ದಲ್ಲಿ ತಿಳಿಸಬೇಕಾಗಿ ವಿನಂತಿ.

2. ಉಪಬಂಧನೆ 24(ಅ) ಪ್ರಕಾರ ವಾರ್ಷಿಕ ಸರ್ವಸದಸ್ಯರ ಸಭೆಗೆ ಪ್ರವೇಶ ಪಡೆಯಲು ಸದಸ್ಯರು ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯ. ಮಾನ್ಯ ಸದಸ್ಯರು ವಾರ್ಷಿಕ ಸರ್ವಸದಸ್ಯರ ಸಭೆಗೆ ಆಗಮಿಸುವಾಗ ಮರೆಯದೆ ಸದಸ್ಯತ್ವದ ಗುರುತಿನ ಚೀಟಿಯನ್ನು ತರಬೇಕಾಗಿ ಪ್ರಾರ್ಥನೆ.

3. 2018–19ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಅದರ ಅನುವರ್ತನೆಯನ್ನು ಪ್ರತ್ಯೇಕವಾಗಿ ಮುದ್ರಿಸಿದ್ದು. ಇದರ ಪ್ರತಿಯನ್ನು ಸದಸ್ಯರು ದಿನಾಂಕ : 16–09–2019 ರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಮತ್ತು ಎಲ್ಲಾ ಶಾಖೆಗಳಲ್ಲಿ ಹಾಗೂ ಸಭೆಯ ದಿನದಂದು ಪಡೆಯಬಹುದು.

4. ಬ್ಯಾಂಕಿನ Website : www.bcbbank.co ರಲ್ಲಿ ಸರ್ವಸದಸ್ಯರ ಸಭೆಯ ಸೂಚನಾ ಪತ್ರ ಮತ್ತು ವಾರ್ಷಿಕ ವರದಿಯನ್ನು ವೀಕ್ಷಿಸಬಹುದು.

5. ತಮ್ಮ ಸೂಚನೆ/ಸಲಹೆಗಳನ್ನು ಸಭೆಯಲ್ಲಿ ಮಂಡಿಸಲು ಇಚ್ಛಿಸುವ ಸದಸ್ಯರು ಸಭೆಗೆ 7 ದಿನಗಳ ಮುಂಚೆ ಲಿಖಿತ ಮೂಲಕ ಕಾರ್ಯದರ್ಶಿಯವರಿಗೆ ತಲು ಸಬೇಕು. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

6. ಬ್ಯಾಂಕಿನ ಕಾರ್ಯವ್ಯಾ_ಯ ಹೊರಗೆ ವಾಸಿಸುತ್ತಿರುವಂತಹ ಸದಸ್ಯರುಗಳು ಯಾವುದೇ ರೀತಿಯ ಸಾಲ ಸೌಲಭ್ಯಗಳನ್ನು ಬ್ಯಾಂಕಿನಿಂದ ಪಡೆಯಲು ಅರ್ಹರಾಗಿರುವುದಿಲ್ಲ. ಆದುದರಿಂದ ಅಂತಹ ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ತಕ್ಷಣ ರದ್ದುಗೊಳಿಸಿಕೊಳ್ಳಲು ಕೋರಲಾಗಿದೆ.

7. ಷೇರು ಸರ್ಟಿ, ಕೇಟನ್ನು ಪಡೆಯದೇ ಇರುವ ಸದಸ್ಯರು ಆಡಳಿತ ಕಛೇರಿಯಲ್ಲಿ ಷೇರು ಸರ್ಟಿ, ಕೇಟನ್ನು ಪಡೆಯಬೇಕಾಗಿ ವಿನಂತಿ.

8. ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ಧನ ಸಹಾಯ ನೀಡುವುದಕ್ಕೆ ಸಂಬಂಧಿಸಿದಂತೆ, ಏ ್ರಲ್–ಮೇ 2018–19ನೇ ಸಾಲಿನಲ್ಲಿ ನಡೆದ ಪರೀಕ್ಷೆಯಲ್ಲಿ ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಮಕ್ಕಳು .ಯು.ಸಿ. 2ನೇ ವರ್ಷದ ಪರೀಕ್ಷೆಯಲ್ಲಿ ಮತ್ತು ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.85ಕ್ಕಿಂತ ಹೆಚ್ಚಿಗೆ ಅಂಕ ಪಡೆದಂತಹವರು ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಈ ಉತ್ತೇಜನ ಪಡೆಯಲು ಅರ್ಹರಾಗಿದ್ದು ವಾರ್ಷಿಕ ಮಹಾಸಭೆಯ ದಿನಾಂಕಕ್ಕೆ 7 ದಿವಸಗಳ ಮುಂಚಿತವಾಗಿ ಸದಸ್ಯತ್ವದ ದಾಖಲೆ ಹಾಗೂ ಅಂಕಪಟ್ಟಿ ಸಹಿತ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬಹುದು.

9. ಮರಣೋತ್ತರ ಪರಿಹಾರ ನಿಧಿಯನ್ನು ಸದಸ್ಯರು ಮರಣ ಹೊಂದಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ಈ ಪರಿಹಾರ ನಿಧಿಗೆ ವಾರಸುದಾರರು ಅರ್ಹರಾಗಿರುತ್ತಾರೆ.

10. ಸದಸ್ಯರುಗಳ ಠೇವಣಿಗಳ ಮೇಲೆ ನೀಡುವ ಬಡ್ಡಿಗೆ Sec.194A (3) (V) of Income Tax Act 1961 ಪ್ರಕಾರ T.D.S. ನಿಂದ ವಿನಾಯತಿ ಪಡೆಯಲು ಅರ್ಹ ಸದಸ್ಯರು/ಗ್ರಾಹಕರು ಆದಾಯ ತೆರಿಗೆ ಫಾರಂ ನಂ. 15ಜಿ/ಹೆಚ್ ನಲ್ಲಿ ಪಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿನಲ್ಲಿ ಈ ಕೂಡಲೇ ಸಲ್ಲಿಸಲು ಕೋರಲಾಗಿದೆ.ಇದನ್ನು ಸಲ್ಲಿಸದಿದ್ದಲ್ಲಿ ವಾರ್ಷಿಕವಾಗಿ ಸಾಮಾನ್ಯರಿಗೆ ರೂ 40,000/– ಮತ್ತು ಹಿರಿಯ ನಾಗರೀಕರಿಗೆ ರೂ.50,000/–ಗಳ ಮೇಲ್ಪಟ್ಟು ಪಡೆಯುವ ಬಡ್ಡಿ ಮೇಲೆ ಶೇ.10 ರಂತೆ ಟಿ.ಡಿ.ಎಸ್. ಕಡಿತಗೊಳಿಸಲಾಗುವುದು. ರೂ.2,50,000/– ವರೆಗಿನ ಬಡ್ಡಿ ಆದಾಯ ಗಳಿಸುವಂತಹವರು 15G ಮತ್ತು 60 ವರ್ಷ ಮೇಲ್ಪಟ್ಟವರು ರೂ.3,00,000/– ವರೆಗಿನ ಬಡ್ಡಿ ಆದಾಯ ಗಳಿಸಿದಲ್ಲಿ 15H ಸಲ್ಲಿಸುವುದು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಈ ಕೂಡಲೇ ಬ್ಯಾಂಕಿನ ಕೇಂದ್ರ ಕಛೇರಿ ಅಥವಾ ಶಾಖೆಗಳಲ್ಲಿ ಸಂಪರ್ಕಿಸಲು ಈ ಮೂಲಕ ವಿನಂತಿಸಲಾಗಿದೆ.

11. ಸದಸ್ಯರುಗಳು ಡಿವಿಡೆಂಡ್ ಅನ್ನು 3 ವರ್ಷಕ್ಕೂ ಮೇಲ್ಪಟ್ಟು (ಅವಧಿ ನಂತರವು) ಪಡೆಯದೆ ಇದ್ದಲ್ಲಿ ಡಿವಿಡೆಂಡ್ ಅನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. ಆದುದರಿಂದ 2015–16ನೇ ಸಾಲಿನ ಡಿವಿಡೆಂಡನ್ನು ಇನ್ನು ಪಡೆದಿಲ್ಲದಿರುವಂತಹ ಸದಸ್ಯರು ದಿನಾಂಕ 23.09.2019 ರ ಒಳಗಾಗಿ ಪಡೆಯಬೇಕಾಗಿ ವಿನಂತಿ. ಈ ಅವಧಿ ನಂತರ ಡಿವಿಡೆಂಡನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. ವಾರ್ಷಿಕ ಮಹಾಸಭೆಯ ನಂತರ ಡಿವಿಡೆಂಡ್ ಅನ್ನು ಸದಸ್ಯರ ಉಳಿತಾಯ ಖಾತೆಗಳಿಗೆ ಜಮಾ ಮಾಡಲಾಗುವುದು. 2015–16, 2016–17 ಮತ್ತು 2017–18ನೇ ಸಾಲಿನ ಡಿವಿಡೆಂಡ್ ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ. ಡಿವಿಡೆಂಡ್ ಜಮಾ ಆಗಿರದೇ ಇದ್ದಲ್ಲಿ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.

12. ಉಳಿತಾಯ ಖಾತೆಯನ್ನು ಹೊಂದಿಲ್ಲದ ಸದಸ್ಯರುಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆದರೆ, ಆಯಾ ವರ್ಷದ ಡಿವಿಡೆಂಡನ್ನು ಅವರವರ ಉಳಿತಾಯ ಖಾತೆಗಳಿಗೆ ವರ್ಗಾಯಿಸಲಾಗುವುದು. ಆದುದರಿಂದ ಉಳಿತಾಯ ಖಾತೆಯನ್ನು ತೆರೆಯಲು ಕೋರಲಾಗಿದೆ. ಬ್ಯಾಂಕು IFS Code ಪಡೆದಿದ್ದು IFS Code No. IBKL0008BCB ಆಗಿರುತ್ತದೆ. NEFT/RTGS ಸೌಲಭ್ಯ ಒದಗಿಸುತ್ತಿದೆ ಇದರಿಂದ ಬೇರೆ ಬ್ಯಾಂಕುಗಳ ಖಾತೆಗಳಿಂದ ಹಣವನ್ನು NEFT/RTGS ಮೂಲಕ ತಮ್ಮ ಖಾತೆಗಳಿಗೆ ವರ್ಗಾಯಿಸಬಹುದು ಮತ್ತು ತಮ್ಮ ಖಾತೆಗಳಿಂದ ಬೇರೆ ಬ್ಯಾಂಕುಗಳ ಖಾತೆಗಳಿಗೆ ಸಹ ವರ್ಗಾಯಿಸಬಹುದು. ಹಾಗೂ ಬೇರೆ ಬ್ಯಾಂಕುಗಳಲ್ಲಿ ನೆಟ್ ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದರೆ ಆ ಖಾತೆಗಳಿಂದ ತಮ್ಮ ಮೊಬೈಲ್ ಫೋನ್ ಮೂಲಕ ತಮ್ಮ ಖಾತೆಗಳಿಗೆ ಹಣವನ್ನು ವರ್ಗಾಯಿಸಬಹುದು. ಈ ಸೌಲಭ್ಯ ಪಡೆಯಲು ವಿನಂತಿ. ಉಳಿತಾಯ/ಚಾಲ್ತಿ ಖಾತೆಗಳಲ್ಲಿನ ವ್ಯವಹಾರಗಳಿಗೆ SMS Alert ಪಡೆಯಲು ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಸಲ್ಲಿಸಬೇಕಾಗಿ ವಿನಂತಿ.

13. ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ಪ್ರತಿ ತಿಂಗಳು ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ್ದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ. 1 ರಂತೆ ಬಡ್ಡಿ ರಿಯಾಯತಿ ನೀಡಲಾಗುವುದು. ಆಯಾ ಹಣಕಾಸು ವರ್ಷ ಪೂರ್ಣಗೊಂಡ ತಕ್ಷಣ ಈ ರಿಯಾಯಿತಿಯನ್ನು ಪಡೆಯಲು ಕೋರಿದೆ.

14. ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾನುಸಾರ 10 ವರ್ಷಕ್ಕೂ ಮೇಲ್ಪಟ್ಟ ಚಾಲ್ತಿಯಲ್ಲಿರದ ಎಲ್ಲಾ ತರಹದ ಠೇವಣಿ ಖಾತೆಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ವರ್ಗಾಯಿಸಬೇಕಾಗಿದ್ದು, ಸದಸ್ಯರು ಇದನ್ನು ಗಮನಿಸಿ ತಮ್ಮ ಠೇವಣಿ ಖಾತೆಗಳನ್ನು ಚಾಲ್ತಿ ಮಾಡುವಂತೆ ಮನವಿ ಮಾಡಿದೆ.

15. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ಕ್ಕೆ ಮಾಡಿರುವ ತಿದ್ದುಪಡಿಗಳಿಗನುಸಾರವಾಗಿ ಬ್ಯಾಂಕಿನ ಉಪನಿಬಂಧನೆಗಳಿಗೆ ಸಮಗ್ರ ತಿದ್ದುಪಡಿಯಾಗಿರುವುದರಿಂದ ಮುಂಬರುವ ಬ್ಯಾಂಕಿನ ಸರ್ವಸದಸ್ಯರ ಸಭೆಗಳಲ್ಲಿ ಸುಸ್ತಿದಾರರಲ್ಲದ ಸದಸ್ಯರು ಮತ ಚಲಾಯಿಸಲು ಉಪನಿಬಂಧನೆ 44ರ ರೀತಿ ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

1) 3 ನಿರಂತರ ಸಹಕಾರ ವರ್ಷಗಳಲ್ಲಿ ಪ್ರತಿ ವರ್ಷ ಒಬ್ಬ ಸದಸ್ಯನು ಉಪನಿಬಂಧನೆ 20ರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು.

(ಅ) ಸದಸ್ಯನು ಕನಿಷ್ಠ ಷೇರು ಮೊಬಲಗು ರೂ.500/– ಹೊಂದಿರತಕ್ಕದ್ದು.

(ಆ) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ.2.500/– ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ.

(ಇ) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 20 ಇರತಕ್ಕದ್ದು

2) ಕಳೆದ 5 ಸಾಮಾನ್ಯ ಸಭೆಗಳ ಪೈಕಿ 3 ಸಾಮಾನ್ಯ ಸಭೆಗಳಿಗೆ ಹಾಜರಾಗತಕ್ಕದ್ದು.

ಮತ ಚಲಾಯಿಸಲು ಮೇಲೆ ತಿಳಿಸಿರುವ ಅರ್ಹತೆಗಳಲ್ಲಿ ಎಲ್ಲಾ ಅರ್ಹತೆಗಳನ್ನು ಪಾಲಿಸಿರಬೇಕು ಅದಕ್ಕೆ ತ್ಪಪ್ಪಿದ್ದಲ್ಲಿ ಸದಸ್ಯರಿಗೆ ಮತ ಚಲಾಯಿಸುವ ಹಕ್ಕಿರುವುದಿಲ್ಲ.

ಮೇಲೆ ತಿಳಿಸಿರುವ ಅಂಶಗಳನ್ನು ತಾವು ಗಮನಿಸಿ ತಮ್ಮ ಮೂಲ ಷೇರು ಮೊಬಲಗು ರೂ.500/–ಕ್ಕಿಂತ ಕಡಿಮೆ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ತಕ್ಷಣ ಪಾವತಿಸಬೇಕೆಂದು ಹಾಗೂ ಕನಿಷ್ಠ ಸೇವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮನವಿ ಮಾಡಿದೆ.

ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೇಂದ್ರ ಕಛೇರಿಯ ಷೇರು ವಿಭಾಗದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಮಾಹಿತಿ ಪಡೆಯಲು ವಿನಂತಿ.

ಬ್ಯಾಂಕಿನ ಎಲ್ಲಾ ನಿರ್ದೇಶಕರು ಮೇಲೆ ತಿಳಿಸಿರುವ ಬ್ಯಾಂಕಿನ ಸೇವೆಗಳನ್ನು ಬಳಸಿಕೊಂಡಿರುತ್ತಾರೆ.

ಸಭೆಯ ದಿನದಂದು ಬೆಳಿಗ್ಗೆ 9 ರಿಂದ 10 ಘಂಟೆಯವರೆಗೆ ಸದಸ್ಯರಿಗೆ ಉಪಹಾರವನ್ನು ಏರ್ಪಡಿಸಲಾಗಿದೆ

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ : ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು–560 011

****

44ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು

ದಿನಾಂಕ 23.09.2018ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ, ಬೆಂಗಳೂರು ನಗರದ ಜಯನಗರ ಬಡಾವಣೆಯ ನಾಲ್ಕನೇ ವಿಭಾಗ, 16ನೇ ಮುಖ್ಯ ರಸ್ತೆಯಲ್ಲಿರುವ, ಭಾರತ್ ವಿದ್ಯಾ ಸಂಸ್ಥೆಯ ಆವರಣದಲ್ಲಿರುವ ಶ್ರೀ ಕೆ.ಆರ್. ಮರುದೇವಗೌಡ ರಂಗಮಂದಿರದಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷರಾದ ಡಾ: ಎಂ. ವೀರಪ್ಪನವರ ಸಭಾಧ್ಯಕ್ಷತೆಯಲ್ಲಿ ಪ್ರಾರಂಭಗೊಂಡು ನಂತರ ಅಧ್ಯಕ್ಷರಾದ ಡಾಃ ಎಂ.ಸಿ. ಜಗತ್‌ರವರ ಸಭಾಧ್ಯಕ್ಷತೆಯಲ್ಲಿ ಮುಂದುವರೆದು ನಡೆದ 44ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು:

ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ : 2100

ಪ್ರಾರ್ಥನೆ :

ಕುಮಾರಿ ಅಮೂಲ್ಯ ಶಾಸ್ತ್ರಿ ರವರಿಂದ ಪ್ರಾರ್ಥನೆ ಹಾಗೂ ನಾಡಗೀತೆಯೊಂದಿಗೆ ಸಭೆಯು ವಿಧ್ಯುಕ್ತವಾಗಿ ಆರಂಭಗೊಂಡಿತು.

ವಿಷಯ – 1 : ಸರ್ವಸದಸ್ಯರ ವಾರ್ಷಿಕ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು

ಬ್ಯಾಂಕಿನ ಕಾರ್ಯದರ್ಶಿಯವರಾದ ಶ್ರೀಮತಿ ಡಿ.ಎ. ಅಮೃತ ರವರು 2017–18ನೇ ಸಾಲಿನ 44ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಸಭೆಯಲ್ಲಿ ಓದಿದರು. ಇದನ್ನು ದಾಖಲು ಮಾಡಲು ಒಪ್ಪಿಗೆ ಸೂಚಿಸಬೇಕೆಂದು ಸಭಾಧ್ಯಕ್ಷರು ಕೋರಿದರು.

ಸೂಚನಾ ಪತ್ರವನ್ನು ಓದಿ ದಾಖಲು ಮಾಡಬಹುದೆಂದು ಸದಸ್ಯರಾದ ಪ್ರೋ: ಟಿ. ನಾರಾಯಣಪ್ಪ ನವರು ಸೂಚಿಸಿದರು. ಸದಸ್ಯರಾದ ಶ್ರೀ ಎನ್.ಎಸ್. ವಿಜಯ್ ರವರು ಅನುಮೋಧಿಸಿದರು. ನಂತರ ಸಭೆಯು ಸೂಚನಾ ಪತ್ರವನ್ನು ಓದಿ ದಾಖಲು ಮಾಡಲು ತನ್ನ ಒಪ್ಪಿಗೆ ನೀಡಿತು. ದಾಖಲು ಮಾಡಲಾಯಿತು.

ವಿಷಯ 2: ದಿನಾಂಕ 17.09.2017 ರಂದು ನಡೆದ ಬ್ಯಾಂಕಿನ 43ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವುದು.

ಬ್ಯಾಂಕಿನ ಉಪಾಧ್ಯಕ್ಷರಾದ ಡಾ: ಎಂ.ವೀರಪ್ಪನವರು ಮಾತನಾಡುತ್ತಾ ದಿನಾಂಕ: 17.09.2017ರಂದು ನಡೆದ 43ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ವಾರ್ಷಿಕ ವರದಿಯ ಪುಟ ಸಂಖ್ಯೆ 5 ರಿಂದ 21ರವರೆಗೆ ಮುದ್ರಿತವಾಗಿದ್ದು, ಸದಸ್ಯರುಗಳು ಈಗಾಗಲೇ ಓದಿರುತ್ತೀರಿ. ಇದನ್ನು ದಾಖಲು ಮಾಡಲು ಒಪ್ಪಿಗೆ ಸೂಚಿಸಬೇಕೆಂದು ಕೋರಿದರು. ಇದನ್ನು ಓದಿ ದಾಖಲು ಮಾಡಬಹುದೆಂದು ಸದಸ್ಯರಾದ ಶ್ರೀ ಟಿ. ರಾಜು ರವರು ಸೂಚಿಸಿದರು. ಸದಸ್ಯರಾದ ಪ್ರೋಃ ಟಿ. ನಾರಾಯಣಪ್ಪ ರವರು ಅನುಮೋದಿಸಿದರು. ನಂತರ ಸಭೆಯು ದಿನಾಂಕ 17.09.2017ರಂದು ನಡೆದ 43ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡಲು ತನ್ನ ಒಪ್ಪಿಗೆ ಸೂಚಿಸಿತು. ದಾಖಲು ಮಾಡಲಾಯಿತು.

ಗತಿಸಿದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸಮರ್ಪಣೆ :

ದಿನಾಂಕ 01.04.2017 ರಿಂದ 31.03.2018ರವರೆಗೆ 103 ಜನ ಸದಸ್ಯರುಗಳು ದೈವಾಧೀನರಾಗಿದ್ದು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲು ಸಭೆಯು ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಿ ಶ್ರದ್ಧಾಂಜಲಿ ಸಮರ್ಪಿಸಿತು.

ಸ್ವಾಗತ ಭಾಷಣ :

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕಿನ 44ನೇ ವಾರ್ಷಿಕ ಮಹಾಸಭೆಗೆ ಆಗಮಿಸಿರುವ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಹಾಗೂ ಗ್ರಾಹಕರಿಗೂ, ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಅಮೂಲ್ಯ ಸಲಹೆಗಳನ್ನು ಮತ್ತು ಮಾರ್ಗದರ್ಶನಗಳನ್ನು ನೀಡುತ್ತಿರುವ ಭಾರತ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಸಹಕಾರ ರತ್ನ ಶ್ರೀ ಬಿ.ಎಲ್. ಲಕ್ಕೇಗೌಡರವರಿಗೂ ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಸ್ವಾಗತ ಕೋರುತ್ತೇನೆ.

ಮಾನ್ಯ ಸಹಕಾರಿ ಬಂಧುಗಳೆ, ಬ್ಯಾಂಕು 43 ವರ್ಷಗಳನ್ನು ಪೂರೈಸಿ 44ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಹುಟ್ಟು ಮತ್ತು ಬೆಳವಣಿಗೆಗೆ ಕಾರಣರಾದ ಭಾರತ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಸಹಕಾರ ರತ್ನ ಸನ್ಮಾನ್ಯ ಶ್ರೀ ಬಿ.ಎಲ್. ಲಕ್ಕೇಗೌಡರ ಮಾರ್ಗದರ್ಶನವನ್ನು ಸ್ಮರಿಸುವುದು ನಮ್ಮ ಆಧ್ಯ ಕರ್ತವ್ಯವಾಗಿರುತ್ತದೆ.

ಬ್ಯಾಂಕು ಅಭಿವೃದ್ಧಿ ಪಥದಲ್ಲೇ ಮುಂದುವರೆಯುತ್ತಿದ್ದು, ಸರ್ವತೋಮುಖ ಬೆಳವಣಿಗೆ ಹೊಂದಿರುತ್ತದೆ ಇದಕ್ಕೆ ಕಾರಣ ಮಾನ್ಯ ಸದಸ್ಯರು ಮತ್ತು ಗ್ರಾಹಕರು ಬ್ಯಾಂಕಿನ ಮೇಲೆ

ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸ. ಮಾನ್ಯ ಸದಸ್ಯರು/ಗ್ರಾಹಕರುಗಳ ವಿಶ್ವಾಸ ಮತ್ತು ನಂಬಿಕೆಗೆ ದಕ್ಕೆ ಬರದಂತೆ ಪ್ರಾಮಾಣಿಕವಾಗಿ ಮತ್ತು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಬ್ಯಾಂಕನ್ನು ಇನ್ನೂ ಉನ್ನತ ಮಟ್ಟಕ್ಕೆ ಕೊಂಡುಯ್ಯುವುದು ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರ ಕರ್ತವ್ಯವಾಗಿರುತ್ತದೆ.

ಬ್ಯಾಂಕು 2017–18ನೇ ಸಾಲಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದು, ವರದಿ ಸಾಲಿನಲ್ಲಿ ಪಾವತಿಯಾದ ಷೇರು ಬಂಡವಾಳ ರೂ. 2.17 ಕೋಟಿಗಳು ಹೆಚ್ಚಳವಾಗಿ ರೂ. 8.59 ಕೋಟಿಗಳಿಗೆ, ಠೇವಣಿಗಳು ರೂ. 36.85 ಕೋಟಿ ಹೆಚ್ಚಳವಾಗಿ ರೂ. 430.96 ಕೋಟಿಗಳಿಗೆ, ಸಾಲ ಮತ್ತು ಮುಂಗಡಗಳು, ರೂ. 40.82 ಕೋಟಿ ಹೆಚ್ಚಳವಾಗಿ 250.39 ಕೋಟಿಗಳಿಗೆ, ಹೂಡಿಕೆಗಳು ರೂ. 9.19 ಕೋಟಿ ಹೆಚ್ಚಳವಾಗಿ 197.42 ಕೋಟಿಗಳಿಗೆ ಮತ್ತು ದುಡಿಯುವ ಬಂಡವಾಳ ರೂ. 41.03 ಕೋಟಿ ಹೆಚ್ಚಳವಾಗಿ ರೂ. 474.63 ಕೋಟಿಗಳಿಗೆ ತಲು ರುತ್ತದೆ.

ವರದಿ ಸಾಲಿನಲ್ಲಿ ನಿವ್ವಳ ಲಾಭದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ರೂ. 15.67 ಲಕ್ಷ ಕಡಿಮೆಯಾಗಿರುತ್ತದೆ. ಇದಕ್ಕೆ ಕಾರಣ 2017–18ನೇ ಸಾಲಿನಲ್ಲಿ ಠೇವಣಿ ಸಂಗ್ರಹಣೆ ಹೆಚ್ಚಳವಾಗಿದ್ದರಿಂದ ಮತ್ತು ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ ಕಡಿಮೆ ಮಾಡಿದ್ದರಿಂದ ನಿವ್ವಳ ಲಾಭದಲ್ಲಿ ಕಡಿಮೆಯಾಗಿರುತ್ತದೆ. ರಾಷ್ಟ್ರೀಕೃತ, ವಾಣಿಜ್ಯ ಮತ್ತು ಖಾಸಗಿ ಬ್ಯಾಂಕುಗಳಿಂದ ಪೈಪೋಟಿ ನಡುವೆಯೂ ಕಳೆದ ಸಾಲಿಗೆ ಹೋಲಿಸಿದಾಗ ರೂ. 40.82 ಕೋಟಿಗಳಷ್ಟು ಸಾಲ ಹೆಚ್ಚುವರಿಯಾಗಿರುತ್ತದೆ. ವಸೂಲಾತಿಯು ಸಹ ಉತ್ತಮವಾಗಿರುತ್ತದೆ.

2018–19ನೇ ಸಾಲಿನಲ್ಲಿ ಸಾಲ ಮತ್ತು ಮುಂಗಡಗಳು ಹೆಚ್ಚಳವಾಗಿರುವುದರಿಂದ ಲಾಭದಲ್ಲಿ ಹೆಚ್ಚಳವಾಗುವ ನಿರೀಕ್ಷೆಯಿದೆ. ವರದಿ ಸಾಲಿನಲ್ಲಿ ಸದಸ್ಯರಿಗೆ ಶೇ. 14ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ವಾರ್ಷಿಕ ಮಹಾ ಸಭೆಗೆ ಶಿಫಾರಸ್ಸು ಮಾಡಿದೆ.

ಸಾಲಗಳ ವಸೂಲಾತಿ ಪ್ರತಿವರ್ಷ ಉತ್ತಮಗೊಳ್ಳುತ್ತಿದ್ದು, ದಿನಾಂಕ 31–03–2018ರ ಅಂತ್ಯಕ್ಕೆ ಒಟ್ಟು ಎನ್. .ಎ. ಶೇ. 4.09 ಮತ್ತು ನಿವ್ವಳ ಎನ್. .ಎ. ಶೇ. 0.22 ರಷ್ಟಾಗಿರುತ್ತದೆ. ದಿನಾಂಕ 31–03–2017ಕ್ಕೆ ಇದ್ದ ಒಟ್ಟು ಎನ್. .ಎ. ಶೇ.6.44 ರಿಂದ ಶೇ. 4.09ಕ್ಕೆ ಮತ್ತು ನಿವ್ವಳ ಎನ್. .ಎ. ಶೇ. 1.86 ರಿಂದ ಶೇ. 0.22ಕ್ಕೆ ಇಳಿದಿರುವುದು ಬ್ಯಾಂಕಿನ ಆಡಳಿತದಲ್ಲಿನ ಸಾಮರ್ಥ್ಯಕ್ಕೆ ಸಾಕ್ಷಿಯಾಗಿರುತ್ತದೆ. ಬ್ಯಾಂಕು ಸುಭದ್ರವಾಗಿರಬೇಕಾದರೆ ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಪಾವತಿಸಬೇಕಾಗಿ ಕೋರುತ್ತೇನೆ.

2017–18ನೇ ಸಾಲಿನಲ್ಲಿಯೂ ಸಹ ಆಡಿಟ್ ವರ್ಗೀಕರಣದಲ್ಲಿ ಬ್ಯಾಂಕನ್ನು 'ಎ' ದರ್ಜೆಗೆ ವರ್ಗೀಕರಿಸಲಾಗಿದ್ದು, ಮಾನ್ಯ ಸದಸ್ಯರುಗಳು ಪಡೆದ ಸಾಲವನ್ನು ಸುಸ್ತಿ ಇಲ್ಲದೆ ಮರುಪಾವತಿಸಿದರೆ ಸುಸ್ತಿ ಶೇಕಡ ಕಡಿಮೆಯಾಗಿ ನಿವ್ವಳ ಲಾಭ ಹೆಚ್ಚಳವಾಗುತ್ತದೆ ಹಾಗೂ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಡಿವಿಡೆಂಡ್ ನೀಡಲು ಸಾಧ್ಯವಾಗುತ್ತದೆ.

ಕಳೆದ ಸಾಲಿನಲ್ಲಿ 20 ಸಂಶಯಾತ್ಮಕ ಸಾಲಗಳನ್ನು ಮನ್ನಾ ಮಾಡಲು ಒಪ್ಪಿಗೆ ನೀಡಿದ್ದು, ಇದಕ್ಕಾಗಿ ನಾವು ಅಭಾರಿಯಾಗಿರುತ್ತೇವೆ. 2017–18ನೇ ಸಾಲಿನಲ್ಲಿ 61 ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವನೆಯನ್ನು ತಮ್ಮ ಮುಂದೆ ಇಟ್ಟಿದ್ದು, ಇದಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಲು ಕೋರಿದೆ. ಈ ಸಾಲಗಳು 1999ರಲ್ಲಿ ಮಂಜೂರಾಗಿದ್ದು, ವಸೂಲಾತಿ ಸಿಬ್ಬಂದಿಗಳು ಎಷ್ಟೇ ಪ್ರಯತ್ನಪಟ್ಟರೂ ವಸೂಲಾಗಿರುವುದಿಲ್ಲ. ಈ ಸಾಲಗಳನ್ನು ಹಾಗೆಯೇ ಮುಂದುವರೆಸಿದಲ್ಲಿ ಬಡ್ಡಿಯು ಹೆಚ್ಚಾಗುತ್ತದೆ ಹಾಗೂ ಇದಕ್ಕಾಗಿ ಆರ್.ಬಿ.ಐ. ನವರಿಂದ ಆಕ್ಷೇಪಣೆಗಳು ಬರುತ್ತವೆ. ಆದುದರಿಂದ ತಾವು ಮನ್ನಾ ಮಾಡಲು ಒಪ್ಪಿಗೆ ನೀಡಬೇಕೆಂದು ಮತ್ತೊಮ್ಮೆ ಕೋರುತ್ತೇನೆ.

ಬ್ಯಾಂಕಿನಲ್ಲಿ ಈಗಾಗಲೇ RTGS/NEFT ಸೌಲಭ್ಯಗಳನ್ನು ನೀಡುತ್ತಿದ್ದು, ಇದರ ಪ್ರಯೋಜನವನ್ನು ಸದಸ್ಯರುಗಳು ಪಡೆದುಕೊಳ್ಳಲು ಮತ್ತು SMS Alert ಗಳನ್ನು ಪಡೆಯಲು ಮೊಬೈಲ್ ಸಂಖ್ಯೆಗಳನ್ನು ಬ್ಯಾಂಕಿಗೆ ನೀಡಲು ಕೋರುತ್ತೇನೆ.

ATM Rupay Card ಅನ್ನು ಸದಸ್ಯರು/ಗ್ರಾಹಕರುಗಳಿಗೆ ವಿತರಿಸಲಾಗುತ್ತಿದ್ದು, ಸದಸ್ಯರು/ಗ್ರಾಹಕರು ಇದರ ಪ್ರಯೋಜನ ಪಡೆಯಲು ಕೋರುತ್ತೇನೆ.

ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಿಗೆ ಸರ್ಕಾರದವರು ಆಗಿಂದಾಗ್ಗೆ ತಿದ್ದುಪಡಿಗಳನ್ನು ತಂದಿದ್ದು, ಇದರ ಮಂಜೂರಾತಿಗಾಗಿ ತಮ್ಮ ಮುಂದೆ ಇಟ್ಟಿದ್ದು, ಇದಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ. ಷೇರು ಬಂಡವಾಳವನ್ನು ರೂ. 10 ಕೋಟಿಗಳಿಂದ ರೂ. 15 ಕೋಟಿಗಳಿಗೆ ಏರಿಸಲು ಪ್ರಸ್ತಾವನೆಯನ್ನು ತಮ್ಮ ಮುಂದೆ ಇಟ್ಟಿದ್ದು ಇದಕ್ಕೂ ಸಹ ತಮ್ಮ ಒಪ್ಪಿಗೆ ಸೂಚಿಸಲು ಕೋರುತ್ತೇನೆ.

ಸದಸ್ಯರುಗಳು/ಗ್ರಾಹಕರುಗಳಿಗೆ ಇನ್ನೂ ಉತ್ತಮ ಸೇವೆ ಸಲ್ಲಿಸುವ ಸಲುವಾಗಿ Mobile Banking ಸೌಲಭ್ಯವನ್ನು ನೀಡಲು ಕ್ರಮಕೈಗೊಳ್ಳಲಾಗುವುದು.

ಬೇಗೂರು ಶಾಖೆಯನ್ನು ದಿನಾಂಕ 19–01–2018ರಂದು ತೆರೆಯಲಾಗಿದೆ. ಬೇಗೂರಿನ ಸುತ್ತ ಮುತ್ತ ಇರುವ ಮಾನ್ಯ ಸದಸ್ಯರು ಈ ಶಾಖೆಯಲ್ಲಿ ವ್ಯವಹಾರಿಸಬೇಕಾಗಿ ವನಂತಿ.

ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಮಾನ್ಯ ಸದಸ್ಯರು ನೀಡಿದ್ದ ಸಲಹೆ/ಸೂಚನೆಗಳನ್ನು ಆಡಳಿತ ಮಂಡಳಿ ಪರಿಶೀಲಿಸಿ, ಕೈಗೊಂಡ ತೀರ್ಮಾನಗಳನ್ನು ವಾರ್ಷಿಕ ವರದಿಯ ಪುಟ ಸಂಖ್ಯೆ 22ರಲ್ಲಿ ನೀಡಿದೆ. ಮಾನ್ಯ ಸದಸ್ಯರು ವಾರ್ಷಿಕ ವರದಿ, ಆಡಿಟ್ ವರದಿ ಮತ್ತು ಅದರ ಅನುವರ್ತನಾ ವರದಿ, ತಿದ್ದುಪಡಿ ಬೈಲಾ ಹಾಗೂ ಕಾರ್ಯಸೂಚಿಯಲ್ಲಿರುವ ವಿಷಯಗಳನ್ನು ಸರ್ವಸದಸ್ಯರ ಸಭೆ ಪರಿಶೀಲಿಸಿ ಅವುಗಳಿಗೆ ಒಪ್ಪಿಗೆ ಕೊಟ್ಟು ಆಡಳಿತ ಮಂಡಳಿ ಇನ್ನೂ ಹೆಚ್ಚಿನ ಕೆಲಸ ಮಾಡಿ ಬ್ಯಾಂಕನ್ನು ಇನ್ನೂ ಉತ್ತಮ ಮಟ್ಟಕ್ಕೆ ತರಲು ಮಾನ್ಯ ಸದಸ್ಯರು ತಮ್ಮ ಅಮೂಲ್ಯ ಸಲಹೆ/ಸೂಚನೆಗಳನ್ನು ನೀಡಿ ಸಭೆಯ ಕಾರ್ಯಕಲಾಪಗಳನ್ನು ಶಾಂತಿಯುತವಾಗಿ ಹಾಗೂ ಸುಗಮವಾಗಿ ನಡೆಸಿಕೊಡಬೇಕೆಂದು ಮತ್ತು ತಮ್ಮ ಸಹಕಾರ ಹಾಗೂ ಬೆಂಬಲ ನೀಡಬೇಕೆಂದು ಕೋರುತ್ತೇನೆ.

ಪ್ರೋ. ಟಿ. ನಾರಾಯಣಪ್ಪನವರು ಮಾತನಾಡುತ್ತಾ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ 17 ಜನ ಸದಸ್ಯರಿದ್ದು, ಬಹಳ ಕಡಿಮೆ ಜನ ನಿರ್ದೇಶಕರು ಸರ್ವಸದಸ್ಯರ ಸಭೆಗೆ ಹಾಜರಾಗಿರುತ್ತಾರೆ. ಇದಕ್ಕೆ ಹಲವು ಕಾರಣಗಳಿರಬಹುದು. ಕೆಲವು ನಿರ್ದೇಶಕರು ಅಪ್ಪಣೆ ಪಡೆದು ಗೈರುಹಾಜರಾಗಿರಬಹುದು. ಆದರೆ ಮುಂದಿನ ಸಾಲಿನ ಸರ್ವಸದಸ್ಯರ ಸಭೆಗೆ ಎಲ್ಲಾ ನಿರ್ದೇಶಕರುಗಳು ಸಭೆಗೆ ಹಾಜರಾಗಿ ಸದಸ್ಯರ ಅಭಿಪ್ರಾಯಗಳನ್ನು ತಿಳಿದುಕೊಂಡು ಸೂಕ್ತ ಕ್ರಮಕೈಗೊಳ್ಳಬಹುದು. ಬ್ಯಾಂಕು ಸರ್ವತೋಮುಖ ಬೆಳವಣಿಗೆ ಕಂಡಿದೆ. ಠೇವಣಿ, ಸಾಲಗಳು, ಹೂಡಿಕೆಗಳು ಹೆಚ್ಚಾಗಿದ್ದು, NPA ಪ್ರಮಾಣವು ಶೇ. 2.66 ರಷ್ಟಿದ್ದು, ಉತ್ತಮ ವಸೂಲಾತಿಯಾಗಿದೆ. ಆದರೆ, 3 ವರ್ಷಕ್ಕೆ ಮೇಲ್ಪಟ್ಟ ಸುಸ್ತಿ ಸಾಲಗಳು ಹಿಂದಿನ ಸಾಲಿಗೆ ಹೋಲಿಸಿದಾಗ ರೂ. 57.63 ಲಕ್ಷಗಳು ಹೆಚ್ಚಾಗಿದ್ದು, ಇದರಿಂದಾಗಿ ಲಾಭವು ಕಡಿಮೆಯಾಗಿರುತ್ತದೆ. ಲಾಭವು ಕಡಿಮೆಯಾದ ಕಾರಣದಿಂದಾಗಿ ಡಿವಿಡೆಂಡ್ ನೀಡುವಲ್ಲಿ ಕಡಿಮೆಯಾಗಿರುತ್ತದೆ. 2015–16ನೇ ಸಾಲಿನಲ್ಲಿ ಶೇ. 16, 2016–17ನೇ ಸಾಲಿನಲ್ಲಿ ಶೇ. 15 ಹಾಗೂ ಪ್ರಸಕ್ತ ಸಾಲಿನಲ್ಲಿ ಶೇ. 14 ನೀಡಿರುತ್ತದೆ. NPA ವಸೂಲಾತಿ ಚೆನ್ನಾಗಿದ್ದು, ಸುಸ್ತಿ ಸಾಲಗಳ ವಸೂಲಾತಿಯು ಕ್ರಮವಾಗಿರುವುದಿಲ್ಲ. ನಿರ್ದೇಶಕರುಗಳು ಸಹ ಸುಸ್ತಿ ಸಾಲಗಳ ವಸೂಲಾತಿ ಕಡೆ ಗಮನ ನೀಡಿದಲ್ಲಿ ಬ್ಯಾಂಕು ಇನ್ನೂ ಉತ್ತಮ ಸ್ಥಿತಿಗೆ ತಲುಪತ್ತದೆ.

61 ಜನ ಸಾಲಗಾರರ ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವನೆಯನ್ನು ಇಟ್ಟಿದ್ದು, ಸಾಲಗಾರರು ಸಾಲ ಕಟ್ಟುವ ಸ್ಥಿತಿಯಲ್ಲಿಲ್ಲ. ಕೆಲವು ಸಾಲಗಾರರು ನಾಪತ್ತೆಯಾಗಿರುತ್ತಾರೆ, ಕೆಲವು ಸಾಲಗಾರರು ನಿಧನ ಹೊಂದಿರುತ್ತಾರೆ ಕೆಲವರು ಸುಸ್ತಿಯಲ್ಲಿದ್ದರೂ, ಸಾಲ ಮರುಪಾವತಿ ಮಾಡುವ ಸ್ಥಿತಿಯಲ್ಲಿರುವುದಿಲ್ಲ, ಕೆಲವರು ಖಾಯಿಲೆಯಿಂದ ನರಳುತ್ತಿದ್ದಾರೆ. ಈ ಕಾರಣಗಳಿಂದಾಗಿ ಸಾಲ

ವಸೂಲಾತಿಯು ಕಷ್ಟಕರವಾಗಿರುತ್ತದೆ. ಈ ಸಾಲಗಳು ಹಾಗೆಯೇ ಉಳಿಸಿದ್ದಲ್ಲಿ ಬಡ್ಡಿ ಮತ್ತು Recovery Charges ಹೆಚ್ಚಾಗುತ್ತವೆಯೇ ಹೊರತು ಖಾತೆ ಮುಕ್ತಾಯವಾಗುವುದಿಲ್ಲ. ಈ ಸಾಲಗಳು 1999 ರಿಂದಲೂ ಮುಂದುವರೆದಿದ್ದು, ಈ ಅವಧಿಯಲ್ಲಿ ವಸೂಲಾತಿ ವಿಭಾಗದಲ್ಲಿ ಇದ್ದ ಸಿಬ್ಬಂದಿಗಳು ವಸೂಲಿ ಮಾಡಬೇಕಾಗಿದ್ದು, ಕ್ರಮವಾಗಿ ಕೆಲಸ ನಿರ್ವಹಿಸಿರುವುದಿಲ್ಲ. ಇದರಿಂದಾಗಿ ಈ ಸ್ಥಿತಿ ಉದ್ಭವವಾಗಿರುತ್ತದೆ. ಈ ರೀತಿಯ ಸಂದರ್ಭಗಳನ್ನು ನಿಭಾಯಿಸಲು ಕರಡು ಮತ್ತು ಅನುಮಾನಾಸ್ಪದ ಸಾಲಗಳಲ್ಲಿ ರೂ. 9,70,00,000/- ಗಳಷ್ಟು ನಿಧಿ ಇದ್ದು, ಇದಕ್ಕೆ Appropriate ಮಾಡಿ ಸಾಲವನ್ನು ಮುಕ್ತಾಯ ಮಾಡಬಹುದು.

ಆಡಿಟ್ ವರದಿಯಲ್ಲಿ ಗುರುತರವಾದ ತಪ್ಪುಗಳು ಇರುವುದಿಲ್ಲ. ಕೆಲವು ಸಣ್ಣ-ಪುಟ್ಟ ತಪ್ಪುಗಳಿದ್ದು, ಇವುಗಳು ಹಿಂದಿನ ಸಾಲಿನಿಂದಲೂ ಮುಂದುವರೆದಿರುತ್ತದೆ. ಇದನ್ನು ಸರಿಪಡಿಸಿಕೊಳ್ಳುತ್ತೇವೆ. ಕ್ರಮ ಕೈಗೊಳ್ಳುತ್ತೇವೆ. ಪಡೆಯಲಾಗುವುದು ಎಂದು ಅನುವರ್ತನೆ ನೀಡಿದ್ದು, ಮುಂದಿನ ಸಾಲುಗಳಲ್ಲಿ ಈ ರೀತಿಯ ತಪ್ಪುಗಳನ್ನು ಕಡಿಮೆ ಮಾಡಬೇಕು. ಒಟ್ಟಾರೆಯಾಗಿ ಆಡಳಿತ ಮಂಡಳಿಯು ಮತ್ತು ಸಿಬ್ಬಂದಿಗಳು ಸಕ್ರಿಯವಾಗಿ ಕೆಲಸ ಮಾಡಿದ್ದು, ರಾಷ್ಟ್ರೀಕೃತ ಬ್ಯಾಂಕುಗಳಿಂದ ಪೈಪೋಟಿ ಇದ್ದಾಗಲೂ ಬ್ಯಾಂಕನ್ನು ಸುಸ್ತಿಯಲ್ಲಿಟ್ಟುಕೊಂಡಿದ್ದಾರೆ ಎಂದರು.

ಶ್ರೀ ಎನ್.ಎಸ್. ವಿಜಯರವರು ಮಾತನಾಡುತ್ತಾ, ಪ್ರಸಕ್ತ ಸಾಲಿನಲ್ಲಿ ಮತ್ತೀಕೆರೆ ಶಾಖೆಯು ರೂ. 1.57 ಕೋಟಿ ಲಾಭಗಳಿಸಿರುತ್ತದೆ. ಹಿಂದಿನ ಸಾಲಗಳಲ್ಲಿ ಹೆಚ್ಚಿಗೆ ಲಾಭ ತಂದ ವ್ಯವಸ್ಥಾಪಕರುಗಳಿಗೆ Increment ನೀಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಉತ್ತಮ ಮಟ್ಟದಲ್ಲಿ ಶಾಖೆಯನ್ನು ಅಭಿವೃದ್ಧಿ ಮಾಡಿ ಹೆಚ್ಚಿನ ಲಾಭ ಗಳಿಸಿರುವ ಮತ್ತೀಕೆರೆ ಶಾಖೆಯ ವ್ಯವಸ್ಥಾಪಕರಿಗೆ Increment ನೀಡಬೇಕು. ಶೇಕಡ 40 ರಷ್ಟು ಸದಸ್ಯರುಗಳು ಸಭೆಗೆ ಬಂದು ತಿಂಡಿ ತಿಂದು ಹಾಗೆಯೇ ಹೊರಟುಹೋಗುತ್ತಾರೆ. ಆಡಳಿತ ಮಂಡಳಿಯವರು ಇದಕ್ಕೆ ಕಡಿವಾಣ ಹಾಕಬೇಕು ಹಾಗೂ ಸದಸ್ಯರುಗಳಿಗೆ ಪತ್ರ ಬರೆದು ತಿಂಡಿ ತಿಂದು ಹಾಗೆಯೇ ಹೋಗದೆ ಸಭೆಯ ಕಲಾಪಗಳಲ್ಲಿ ಭಾಗವಹಿಸಬೇಕೆಂದು ತಿಳಿಸಬೇಕು ಎಂದು ಸಭೆಗೆ ತಿಳಿಸಿದರು.

ಶ್ರೀ ನಂಜುಂಡಪ್ಪನವರು ಮಾತನಾಡುತ್ತಾ ಬ್ಯಾಂಕಿನ ಶಾಖಾವಾರು ಆದಾಯದಲ್ಲಿ ಜಯನಗರ ಶಾಖೆ ನಷ್ಟದಲ್ಲಿದೆ. ಲಾಭ ಗಳಿಕೆಯಲ್ಲಿ ಮತ್ತೀಕೆರೆ ಶಾಖೆಯು ಮೊದಲ ಸ್ಥಾನದಲ್ಲಿದೆ. BES ಹಾಗೂ ಬೇಗೂರು ಶಾಖೆಯು ನಷ್ಟದಲ್ಲಿದೆ. ಜಯನಗರ ಶಾಖೆಯು ಹೈಫೈ ಪ್ರದೇಶದಲ್ಲಿದ್ದು, ಇಲ್ಲಿನ ಜನರು ಹೆಚ್ಚಿನ ಸಾಲ ಪಡೆದುಕೊಳ್ಳುವುದಿಲ್ಲ, ಆದರೆ ಮತ್ತೀಕೆರೆ ಶಾಖೆಯಲ್ಲಿ ಸಾಲಗಳು ಹೆಚ್ಚಾಗಿ

ಹೋಗುತ್ತಿದ್ದು ಇದಕ್ಕೆ ಕಾರಣ ಆ ಪ್ರದೇಶದಲ್ಲಿನ ನಿರ್ದೇಶಕರುಗಳು ಬ್ಯಾಂಕಿನ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿ ಸದಸ್ಯರುಗಳನ್ನು ಭೇಟಿ ಮಾಡಿ ಸಾಲಗಳನ್ನು ಪಡೆದುಕೊಳ್ಳುವಂತೆ ಮಾಡಿರುತ್ತಾರೆ. ಬೇರೆ ಶಾಖೆಗಳಲ್ಲಿ ಸಾಲಗಳು ನೀರಿಕ್ಷಿತ ಮಟ್ಟದಲ್ಲಿ ಹೋಗುತ್ತಿಲ್ಲ. ಆದುದರಿಂದ ಸಾಲಗಳು ಹೆಚ್ಚಿಗೆ ಹೋಗುವ ಪ್ರದೇಶದಲ್ಲಿ ಶಾಖೆಗಳನ್ನು ತೆರೆಯಬೇಕು. ಮಹಾಲಕ್ಷ್ಮೀ ಬಡಾವಣೆಯಲ್ಲಿ ಸಾಲ ಪಡೆಯುವವರೂ ಹೆಚ್ಚಾಗಿರುವುದರಿಂದ ಆ ಪ್ರದೇಶದಲ್ಲಿ ಶಾಖೆಯನ್ನು ತೆರೆಯಬೇಕು. ಶಾಖೆಗಳನ್ನು ಎಲ್ಲಿ ಬೇಕಾದರೂ ತೆರೆಯಲು RBI ನವರು ಪರವಾನಗಿ ನೀಡುತ್ತಾರೆ. ಆಡಳಿತ ಮಂಡಳಿಯವರು ಶಾಖೆಯನ್ನು ತೆರೆಯಲು ಪ್ರಯತ್ನಿಸಬೇಕು. ಕಳೆದ 3–4 ಸಾಲುಗಳಿಗೆ ಹೋಲಿಸಿಕೊಂಡರೆ ಈ ಸಾಲಿನಲ್ಲಿ ಬ್ಯಾಂಕಿನ ವ್ಯವಹಾರವು ಉನ್ನತಮಟ್ಟದಲ್ಲಿದೆ. ಇದಕ್ಕಾಗಿ ಆಡಳಿತ ಮಂಡಳಿಯವರನ್ನು ಪ್ರಶಂಸಿಸಬೇಕು. 1999, 2000ನೇ ಸಾಲಿನಿಂದ 2005ನೇ ಸಾಲಿನವರೆಗೆ ನೀಡಿರುವ 61 ಸಾಲಗಳನ್ನು ಮನ್ನಾ ಮಾಡಬೇಕೆಂಬ ಪ್ರಸ್ತಾವನೆಯನ್ನು ತಂದಿರುತ್ತಾರೆ. ಸಾಲ ಮನ್ನಾ ಮಾಡಿದರೆ ಹೀಗಿರುವ ಸಾಲದಾರರ ಜೊತೆ ಇನ್ನೂ ಅನೇಕ ಜನ ಸಾಲಗಾರರು ಸಾಲ ಕಟ್ಟದ ಪರಿಸ್ಥಿತಿ ಉದ್ಭವವಾದಲ್ಲಿ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತೀರಿ ? ಆದುದರಿಂದ ಸಾಲ ಮನ್ನಾ ಮಾಡುವ ಮುನ್ನ ಧೀರ್ಘವಾಗಿ ಯೋಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಈ ರೀತಿ ಸಾಲಗಳನ್ನು ಮನ್ನಾ ಮಾಡುತ್ತಾ ಹೋದಲ್ಲಿ ಬ್ಯಾಂಕು ನಷ್ಟ ಅನುಭವಿಸಬೇಕಾಗುತ್ತದೆ. ಹಾಗೂ ಡಿವಿಡೆಂಡನ್ನು ನೀಡಲು ಸಾಧ್ಯವಾಗದ ಪರಿಸ್ಥಿತಿಯು ಉದ್ಭವವಾಗುತ್ತದೆ. ಬ್ಯಾಂಕಿನಲ್ಲಿ ಸಿಬ್ಬಂದಿಗಳು 30 ವರ್ಷಗಳಿಂದ ಸೇವೆ ಸಲ್ಲಿಸಿರುತ್ತಾರೆ. ಕೆಲವು ಸಿಬ್ಬಂದಿಗಳು ಉನ್ನತ ಮಟ್ಟದ ವ್ಯಾಸಂಗ ಮಾಡಿದಂತಹವರಿಗೆ ಬಡ್ತಿ ನೀಡಿರುತ್ತೀರಿ ಇದಕ್ಕೆ ಧನ್ಯವಾದಗಳು. ಹಿಂದಿನ ಸರ್ವಸದಸ್ಯರ ಸಭೆಗಳಲ್ಲಿ ಹಾಲಿ ಇರುವ ಸಿಬ್ಬಂದಿಗಳಿಗೆ ಬಡ್ತಿ ನೀಡಬೇಕೆಂದು ತಿಳಿಸಿದ್ದು, ಈಗ ಕಾಲ ಬದಲಾಗಿದೆ ಈಗ ಹೊರಗಿನವರಿಗೆ ಕಾರ್ಯದರ್ಶಿ ಹುದ್ದೆಯನ್ನು ನೀಡಿರುತ್ತೀರಿ. ಹಾಲಿ ಇರುವ ಸಿಬ್ಬಂದಿಗೆ ಬಡ್ತಿ ನೀಡಿದರೆ. ಹೆಚ್ಚಿನ ಸಂಬಳ ನೀಡಬೇಕಾಗಿರುವುದಿಲ್ಲ, ಏಕೆಂದರೆ ಹಾಲಿ ಇರುವ ಸಿಬ್ಬಂದಿಗಳು ವೇತನ ಶ್ರೇಣಿಯಲ್ಲಿ ಅಂತಿಮ ಘಟ್ಟದಲ್ಲಿದ್ದು, ರೂ. 2000 ಗಳಿಂದ 3000ಗಳಷ್ಟು ಸಂಬಳವನ್ನು ಹೆಚ್ಚಿಗೆ ನೀಡಬೇಕಾಗಿರುತ್ತದೆ. ಅಲ್ಲದೆ ಹಾಲಿ ಇರುವ ಸಿಬ್ಬಂದಿಗಳಿಗೆ ಅನುಭವವಿಲ್ಲವೆ ? ಇಂತಹವರಿಗೆ ಬಡ್ತಿ ನಿಡಿ ಪ್ರೋತ್ಸಾಹಿಸಲು ಕೋರಿದೆ ಎಂದರು.

ಪ್ರೊ. ಕೃಷ್ಣೇಗೌಡರವರು ಮಾತನಾಡುತ್ತಾ ಸಭೆಯ ಕಾರ್ಯಸೂಚಿಯಲ್ಲಿ ಶ್ರೀ ಬಿ. ತುಳಸೀಧರ ಪ್ರಭಾರ ಕಾರ್ಯದರ್ಶಿ ಎಂದು ನಮೂದಿಸಿದ್ದು, ಹಿಂದೆ ಇದ್ದ ಕಾರ್ಯದರ್ಶಿ ರಾಜೀನಾಮೆ ನೀಡಲು ಕಾರಣವೇನು ? ಈಗ ಶ್ರೀಮತಿ ಡಿ.ಎ. ಅಮೃತರವರನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಂಡಿದ್ದೀರಿ ಇದರ ಹಿನ್ನೆಲೆ ಏನು ? ಎಂದು ಪ್ರಶ್ನಿಸಿದರು. ನೂರಾರು ಕೋಟಿ ವಹಿವಾಟು

ನಡೆಸುವ ಈ ಸಂಸ್ಥೆಯ ವಾರ್ಷಿಕ ಮಹಾ ಸಭೆಗೆ ಬ್ಯಾಂಕಿನ ಹಾಲಿ ಅಧ್ಯಕ್ಷರು Alternative Meeting ಗೈರು ಹಾಜರಾಗಲು ಕಾರಣವೇನು ? ಸಭೆಯಲ್ಲಿ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಸಮಜಾಯಿಷಿ/ಉತ್ತರ ನೀಡುವ ಜವಾಬ್ದಾರಿಯನ್ನು ಉಪಾಧ್ಯಕ್ಷರಿಗೆ ನೀಡುವುದೇಕೆ ? ಎಂಬುವುದಕ್ಕೆ ಸ್ಪಷ್ಟೀಕರಣ ನೀಡಬೇಕು. ಬ್ಯಾಂಕಿನಲ್ಲಿ ಏನಾದರೂ ಅವ್ಯವಹಾರ ನಡೆದಿದೆಯಾ ? 3 ಜನ ಕಾರ್ಯದರ್ಶಿಗಳು ಬದಲಾಗಿದ್ದಾರೆ. ಬ್ಯಾಂಕಿನ ಬೆಳವಣಿಗೆಯು ಎಲ್ಲಿದೆಯೋ ಅಲ್ಲೇ ಇದೆ. NPA ಕಡಿಮೆಯಾಗಿದೆ. ಹಿಂದಿನ ಸಾಲಿನ ಸರ್ವ ಸದಸ್ಯರ ಸಭೆಯ ನಡವಳಿಕೆಗಳನ್ನು ದಾಖಲು ಮಾಡಲು ಒಪ್ಪಿಗೆ ಪಡೆದಿದ್ದೀರಿ. ಆದರೆ ನಾನು ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಶ್ರೀಮಾನ್ ಬಿ.ಎಲ್. ಲಕ್ಕೇಗೌಡರ ಹೆಸರಿನಲ್ಲಿ ದತ್ತಿಯನ್ನು ಸ್ಥಾಪಿಸಲು ಮನವಿ ಮಾಡಿದ್ದೆ. ಇದು ಕಾರ್ಯಗತವಾಗಿಲ್ಲ. ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಆತುರಾತುರವಾಗಿ ಸದಸ್ಯರ ಅನುಮತಿ ಪಡೆದು ಸಭೆಯ ಕಾರ್ಯಕಲಾಪಗಳನ್ನು ಬೇಗನೆ ಮುಗಿಸುವ ಕೆಲಸ ಮಾಡುತ್ತೀರಿ. ಸದಸ್ಯರುಗಳಿಗೆ ನೀಡಿದ ಭರವಸೆಗಳನ್ನು ಕಾರ್ಯಗತ ಮಾಡಿಲ್ಲ. ಆಡಳಿತ ಮಂಡಳಿಯು ಸರ್ವಸದಸ್ಯರ ಸಭೆಗೆ ನೀಡುವ ವರದಿಗಳು ನೈಜವಾಗಿರಬೇಕು. ಇಂದಿನ ಸಭೆಯಲ್ಲಿ ಶ್ರೀ ಬಿ.ಎಲ್. ಲಕ್ಕೇಗೌಡರ ಹೆಸರಿನಲ್ಲಿ ದತ್ತಿಯನ್ನು ಸ್ಥಾಪಿಸುವ ಬಗ್ಗೆ ತೀರ್ಮಾನವಾಗಲೇಬೇಕು. ಬ್ಯಾಂಕಿನಲ್ಲಿ ಕಾರ್ಯದರ್ಶಿಗಳು ಬದಲಾಗುತ್ತಿದ್ದಾರೆ ಇದಕ್ಕೆ ಕಾರಣವೇನು ? ಆಡಳಿತ ಮಂಡಳಿಯು ಇದಕ್ಕೆ ಸ್ಪಷ್ಟೀಕರಣವನ್ನು ನೀಡಬೇಕು. ಆಡಿಟ್ ವರದಿಯಲ್ಲಿ ಆಡಿಟ್ ರವರು ಸಣ್ಣ-ಪುಟ್ಟ ಅಕ್ಷೇಪಗಳನ್ನು ತಿಳಿಸಿದ್ದು, ಇದನ್ನು ಸರಿಪಡಿಸಿಕೊಳ್ಳಬೇಕು. ಪ್ರಸಕ್ತ ಸಾಲಿನಲ್ಲಿ ಶೇ. 14 ರಷ್ಟು ಡಿವಿಡೆಂಡ್ ನೀಡಲಾಗಿದೆಯೆಂದು ತಿಳಿಸಿದ್ದು, ಇದಕ್ಕೆ ರೂ.1,18,42,625.80 ಗಳ Income Tax ಕಟ್ಟಿರುವುದೇ ಕಾರಣವೆಂದು ಸಭೆಗೆ ತಿಳಿಸಿರುತ್ತಾರೆ. ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಇದೇ ವಿಚಾರವನ್ನು ಪ್ರಸ್ತಾಪಿಸಿದ್ದು Income Tax ಕಟ್ಟುವುದಕ್ಕೂ ಹಾಗೂ ಸದಸ್ಯರುಗಳಿಗೆ ಡಿವಿಡೆಂಡ್ ನೀಡುವುದಕ್ಕೂ ಸಂಬಂಧವಿರುವುದಿಲ್ಲ. ಸದಸ್ಯರುಗಳಿಗೆ ಹೆಚ್ಚಿಗೆ ಡಿವಿಡೆಂಡ್ ನೀಡಬೇಕು. ಒಳ್ಳೆಯ ಪ್ರದೇಶದಲ್ಲಿ ಶಾಖೆಗಳನ್ನು ತೆರೆದು ಉತ್ತಮ ನಿರ್ವಹಣೆ ಮಾಡಬೇಕೆಂದು ಸಲಹೆ ನೀಡಿದ್ದು, ಇದನ್ನು ಕಾರ್ಯಗತಮಾಡಿರುವುದಿಲ್ಲ. BES ಶಾಖೆಯು ನಷ್ಟದಲ್ಲಿದೆ. ಬ್ಯಾಂಕಿನ ನಿರ್ದೇಶಕರು ಮತ್ತು BES ಶಾಖೆಯ ಸಿಬ್ಬಂದಿಗಳು ಭಾರತ್ ಸಮೂಹ ಸಂಸ್ಥೆಯ ಅಂಗ ಸಂಸ್ಥೆಗಳಿಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಗಳಿಗೆ ಸಾಲವನ್ನು ಪಡೆದುಕೊಳ್ಳುವಂತೆ ವಿನಂತಿಸಿಕೊಂಡಿಲ್ಲ. ನೀವುಗಳು ಅಂಗ ಸಂಸ್ಥೆಗೆ ಬಂದು ವಿನಂತಿಸಿಕೊಂಡಲ್ಲಿ ಸುಮಾರು ರೂ. 500 ಕೋಟಿ ಸಾಲ ಅಂಗ ಸಂಸ್ಥೆಯ ಸಿಬ್ಬಂದಿಗಳಿಗೆ ನೀಡಬಹುದು, ಸಿಬ್ಬಂದಿಗಳ ಸಂಬಳ BES ಶಾಖೆಗೆ ಬರುವುದರಿಂದ ಸುಲಭವಾಗಿ ಸಾಲ ವಸೂಲಾಗುತ್ತದೆ. ಈ ರೀತಿಯ ಕೆಲಸಗಳನ್ನು ಬಿಟ್ಟು ಸಾಲ ಮನ್ನಾ ಮಾಡಲು ಪ್ರಸ್ತಾವನೆಯನ್ನು ತಂದಿರುತ್ತೀರಿ, ಇಂದು ಈ

ಪ್ರಸ್ತಾವನೆಗೆ ಒಪ್ಪಿಗೆ ನೀಡಿದಲ್ಲಿ ಮುಂದೆ 40–50 ಜನ ಸದಸ್ಯರು ಸಾಲ ಪಡೆದು ಸಾಲ ಮರುಪಾವತಿ ಮಾಡದಿದ್ದಲ್ಲಿ ಏನು ಕ್ರಮ ಕೈಗೊಳ್ಳುವಿರಿ ಅಥವಾ ಸಾಲ ಮನ್ನಾ ಮಾಡಲು ಶಿಫಾರಸ್ಸು ಮಾಡುವಿರಾ ? ಇದಕ್ಕೆ ಸ್ಪಷ್ಟೀಕರಣ ನೀಡಿ. ಈ ರೀತಿಯ ಸಾಲಗಳಿಗೆ ಇನ್ನೂ ಹೆಚ್ಚಿನ ಪ್ರಯತ್ನ ಮಾಡಿ ಖಾತೆಗಳ ಮುಕ್ತಾಯಕ್ಕೆ ಕ್ರಮ ಕೈಗೊಳ್ಳಬೇಕು. ಸಾಲ ವಸೂಲಾತಿ ಉಪಸಮಿತಿಯು ಹೆಚ್ಚಿನ ಗಮನ ಹರಿಸಬೇಕು. ಸಿಬ್ಬಂದಿಗಳು/ನಿರ್ದೇಶಕರುಗಳು ಸಾಲಗಾರರ ಬಳಿಗೆ ಹೋಗಿ ಇದು ಸಾರ್ವಜನಿಕರ ದುಡ್ಡು ಎಂದು ಹೇಳಿ ವಿನಂತಿಸಿಕೊಳ್ಳಬೇಕು ಹಾಗೂ ಸಾಲ ವಸೂಲಾತಿಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದರೂ ವಸೂಲಾಗದಿದ್ದ ಪಕ್ಷದಲ್ಲಿ ಸಾಲ ಮನ್ನಾ ಮಾಡಲು ಪ್ರಸ್ತಾವನೆಯನ್ನು ಸರ್ವಸದಸ್ಯರ ಸಭೆ ಮುಂದೆ ತರಬೇಕು. ವಾರ್ಷಿಕ ವರದಿ ಮತ್ತು ಆಡಿಟ್ ವರದಿ ಪುಸ್ತಕವನ್ನು 15 ದಿನಗಳ ಮುಂಚಿತವಾಗಿ ಸದಸ್ಯರುಗಳಿಗೆ ಕಳುಹಿಸಬೇಕು. ಸದಸ್ಯರುಗಳು ಆಡಿಟ್ ವರದಿ ಮತ್ತು ವಾರ್ಷಿಕ ವರದಿಯನ್ನು ಓದಿ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಲು ಅನುಕೂಲವಾಗುತ್ತದೆ. ಆಡಳಿತ ಮಂಡಳಿಯು ಬ್ಯಾಂಕಿನ ಅಭಿವೃದ್ಧಿಗಾಗಿ ಚೆನ್ನಾಗಿ ಕೆಲಸ ಮಾಡಿರುತ್ತಾರೆ. ಶ್ರೀ ಬಿ.ಎಲ್. ಲಕ್ಕೇಗೌಡರ ಹೆಸರಿನಲ್ಲಿ ದತ್ತಿಯನ್ನು ಖಂಡಿತ ಪ್ರಾರಂಭಿಸಬೇಕು ಇದಕ್ಕೆ ಅಡೆತಡೆಗಳೇನಾದರೂ ಬಂದಲ್ಲಿ ಅವುಗಳನ್ನು ನಿವಾರಿಸಲು ಸದಸ್ಯರುಗಳಾದ ನಾವುಗಳು ಸಹಾಯ ಮಾಡುತ್ತೇವೆ. ಆಡಿಟ್ ವರದಿಯಲ್ಲಿ ಸಣ್ಣ–ಪುಟ್ಟ ತಪ್ಪುಗಳಿದ್ದು, ಇವುಗಳು ಮುಂದಿನ ಸಾಲಿನಲ್ಲಿ ಪುನರಾವರ್ತನೆ ಆಗಬಾರದು. ಒಳ್ಳೆಯ ಕಡೆ ಶಾಖೆಗಳನ್ನು ತೆರೆಯಿರಿ. ಬ್ಯಾಂಕನ್ನು ಹೆಚ್ಚಿನ ಅಭಿವೃದ್ಧಿಯತ್ತ ಕೊಂಡೊಯ್ಯಿರಿ.

ಶ್ರೀ ವೆಂಕಟಸ್ವಾಮಿ ರೆಡ್ಡಿರವರು ಮಾತನಾಡುತ್ತಾ, ಅಧ್ಯಕ್ಷರಾದ ಡಾಃ ಎಂ.ಸಿ. ಜಗತ್ ರವರು ಉತ್ಸಾಹಿಗಳಾಗಿದ್ದು ಸಂಸ್ಥೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುತ್ತಿರೆಂದು ನಾನು ಭಾವಿಸಿದ್ದೆ. ಆದರೆ ಪ್ರೊಃ ಕೃಷ್ಣೇಗೌಡರು ಹೇಳಿದ ಹಾಗೆ ಸಾಲ ಮನ್ನಾ ಮಾಡುವ ಪ್ರಸ್ತಾವನೆಯನ್ನು ತಂದಿರುವುದು ತಪ್ಪು, ಈ ಸಾಲಗಳನ್ನು ಯಾವ ನಿರ್ದೇಶಕರು ಶಿಫಾರಸ್ಸು ಮಾಡಿದ್ದಾರೋ ಅವರಿಂದ ವಸೂಲಿ ಮಾಡಬೇಕು. ಬ್ಯಾಂಕು ಸಾಲ ನೀಡಿ ಸಾಲ ವಸೂಲಾತಿಯನ್ನು ಚೆನ್ನಾಗಿ ಮಾಡುತ್ತಿದೆ. ಶಾಖೆಗಳ ವಿವರಗಳನ್ನು ಮುಂದಿನ ವರ್ಷದ ವಾರ್ಷಿಕ ವರದಿಯಲ್ಲಿ ನೀಡಬೇಕು. ವಾರ್ಷಿಕ ವರದಿ ಮತ್ತು ಆಡಿಟ್ ವರದಿಯ ಪುಸ್ತಕವನ್ನು ಇಂದು ಪಡೆದುಕೊಂಡಿರುತ್ತೇನೆ. Meeting Notice 15 ದಿನಗಳ ಮುಂಚೆ ನನಗೆ ಬಂದಿದ್ದು, ವಾರ್ಷಿಕ ವರದಿ ಮತ್ತು ಆಡಿಟ್ ವರದಿಯನ್ನು ಸಭೆಯ ಮುಂಚೆ ಸದಸ್ಯರುಗಳಿಗೆ ತಲುಪುವ ವ್ಯವಸ್ಥೆ ಮಾಡಿ ಎಂದರು.

ಶ್ರೀ ಲಿಂಗಪ್ಪನವರು ಮಾತನಾಡುತ್ತಾ ನಾನು ಬೇಗೂರಿನಲ್ಲಿ ಶಾಖೆ ತೆರೆಯಬೇಕು ಎಂದು ಹಿಂದಿನ ಆಡಳಿತ ಮಂಡಳಿಯವರನ್ನು ವಿನಂತಿಸಿಕೊಂಡಿದ್ದು, ಅಧ್ಯಕ್ಷರಾದ ಡಾಃ ಎಂ.ಸಿ.ಜಗತ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ 19–01–2018 ರಂದು ತೆರೆದಿದ್ದು, ಇದಕ್ಕಾಗಿ ಆಡಳಿತ ಮಂಡಳಿ ಸದಸ್ಯರುಗಳಿಗೆ ಕೃತಜ್ಞತೆಯನ್ನು ಅ ರ್ಪಿಸುತ್ತೇನೆ.

ಅಧ್ಯಕ್ಷರು ಸದಸ್ಯರುಗಳ ಪ್ರಶ್ನೆಗೆ ಉತ್ತರಿಸಿ ಮಾತನಾಡುತ್ತಾ. ಕಳೆದ ಸಾಲಿನ ಸರ್ವಸದಸ್ಯರ ಸಭೆಯಲ್ಲಿ ಶ್ರೀಮಾನ್ ಬಿ.ಎಲ್. ಲಕ್ಕೇಗೌಡರವರ ಹೆಸರಿನಲ್ಲಿ ದತ್ತಿ ಸ್ಥಾಪನೆ ಮಾಡುವ ಬಗ್ಗೆ ತೀರ್ಮಾನ ಕೈಗೊಂಡಿದ್ದು, ಅದನ್ನು ಕಾರ್ಯಗತಗೊಳಿಸುವ ಬಗ್ಗೆ ನಮಗೂ ಕಳಕಳಿ ಇದೆ. Demonetization ಆದ ಕಾರಣದಿಂದಾಗಿ ಬ್ಯಾಂಕು ಸಂಕಷ್ಟಗಳನ್ನು ಎದುರಿಸಿತು. ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಹೆಚ್ಚಿನ ಸಾಲಗಳನ್ನು ನೀಡಿದೆ ಸಾಲ ವಸೂಲಾತಿ ಚೆನ್ನಾಗಿ ನಡೆದಿದೆ. NPA ಕಡಿಮೆಯಾಗಿದೆ. ಆದರೂ ನೀರಿಕ್ಷಿಸಿದ ಲಾಭ ಗಳಿಸಲು ಸಾಧ್ಯವಾಗಿರುವುದಿಲ್ಲ. 2018–19ನೇ ಸಾಲಿನಲ್ಲಿ ಈಗಾಗಲೇ ಹೆಚ್ಚಿಗೆ ಸಾಲ ನೀಡಿದ್ದು ವಸೂಲಾತಿಯು ಚೆನ್ನಾಗಿ ನಡೆಯುತ್ತಿರುವ ಕಾರಣದಿಂದಾಗಿ ಲಾಭವು ಹೆಚ್ಚಾಗಬಹುದೆಂಬ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಬ್ಯಾಂಕು ಹೆಚ್ಚಿನ ಲಾಭ ಗಳಿಸಿದ್ದಲ್ಲಿ ದತ್ತಿಯನ್ನು ಸ್ಥಾ ಪಿಸಬಹುದು. ಹಿಂದಿನ ಸರ್ವ ಸದಸ್ಯರ ಸಭೆಯಲ್ಲಿ ಒಂದು ವರ್ಷದ ಡಿವಿಡೆಂಡನ್ನು ದತ್ತಿ ಮಾಡಲು ಉಪಯೋಗಿಸಿ ಎಂದು ತಿಳಿಸಿದ್ದು, ಹಿಂದೆ ಶ್ರೀಮಾನ್ ಬಿ.ಎಲ್. ಲಕ್ಕೇಗೌಡರು ಸ್ವಾಮೀಜಿಯವರಿಗೆ ನೀಡಬೇಕೆಂದು ತೀರ್ಮಾನಿಸಿದಾಗ ಸದಸ್ಯರುಳಿಂದ ವಿರೋದ ವ್ಯಕ್ತವಾಯಿತು. ಬ್ಯಾಂಕಿನಲ್ಲಿ 40 ಸಾವಿರ ಜನ ಸದಸ್ಯರುಗಳಿದ್ದು ಡಿವಿಡೆಂಡನ್ನು ಬೇರೆ ಉದ್ದೇಶಕ್ಕೆ ನೀಡಲು ಸಾಧ್ಯವಿರುವುದಿಲ್ಲ. 2018–19ನೇ ಸಾಲಿನಲ್ಲಿ ಹೆಚ್ಚಿಗೆ ಲಾಭ ಬಂದಾಗ ಶ್ರೀಮಾನ್ ಬಿ.ಎಲ್. ಲಕ್ಕೇಗೌಡರ ಹೆಸರಿನಲ್ಲಿ ದತ್ತಿಯನ್ನು ಸ್ಥಾ ಪಿಸುತ್ತೇವೆ. ಬ್ಯಾಂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ. ಆದರೆ ಸಣ್ಣ–ಪುಟ್ಟ ತಪ್ಪುಗಳು ಆಗಿರಬಹುದು. ಯಾವುದೇ ಸಂಸ್ಥೆಯಲ್ಲಿ ಈ ರೀತಿಯ ಸಣ್ಣ–ಪುಟ್ಟ ತಪ್ಪುಗಳು ಆಗುವುದು ಸಹಜ. ಈ ಸಣ್ಣ–ಪುಟ್ಟ ತಪ್ಪುಗಳನ್ನು ತಿದ್ದಿಕೊಂಡು ಕಾರ್ಯನಡೆಸುತ್ತೇವೆ.

ವಿಷಯ : 3. 2017–2018ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು 2017–18ನೇ ಸಾಲಿನ ವರದಿಯನ್ನು ಮಂಡಿಸಿದರು ಸದಸ್ಯರಾದ ಶ್ರೀ ಬೈರೇಶಪ್ಪರವರು ಸೂಚಿಸಿದರು. ಶ್ರೀ ನಾರಾಯಣಸ್ವಾಮಿರವರು ಅನುಮೋದಿಸಿದರು. ನಂತರ ಸಭೆಯು 2017–18ನೇ ಸಾಲಿನ ವಾರ್ಷಿಕ ವರದಿಗೆ ಅನುಮೋದನೆ ನೀಡಿತು.

ವಿಷಯ 4: 2017-18ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.

ಸಭಾಧ್ಯಕ್ಷರಾದ ಡಾ: ಎಂ. ಸಿ. ಜಗತ್‌ರವರು 2017–18ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಂಡಿಸಿದರು ಪ್ರೊ॥ ಟಿ. ನಾರಾಯಣಪ್ಪನವರು ಸೂಚಿಸಿದರು. ಶ್ರೀ ನಂಜುಂಡೇಗೌಡರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2017–18ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಬ್ಯಾಂಕಿನ ಲೆಕ್ಕಪತ್ರಗಳಿಗೆ ಅಂಗೀಕಾರ ನೀಡಿತು.

ವಿಷಯ 5: 2017-18ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು 2017-18ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದರು. ಸದಸ್ಯರಾದ ಶ್ರೀ ಲಿಂಗಪ್ಪನವರು ಸೂಚಿಸಿದರು. ಪೋ: ನಂಜುಂಡೇಗೌಡರು ಅನುಮೋದಿಸಿದರು. ನಂತರ ಸಭೆಯು ಸರ್ವಾನುಮತದಿಂದ 2017-18ನೇ ಸಾಲಿನ ಬ್ಯಾಂಕಿನ ನಿವ್ವಳ ಲಾಭದ ಹಂಚಿಕೆಗೆ ಅನುಮೋದನೆ ನೀಡಿತು.

ಕ್ರ.ಸಂ.	ಬಾಬ್ತುಗಳು		ಲಾಭದ ಹಂಚಿಕೆ
1	ಕಾಯ್ದಿಟ್ಟ ನಿಧಿ	ಶೇ. 25	42,93,031.00
2	ಸಹಕಾರಿ ಶಿಕ್ಷಣ ನಿಧಿ	ಶೇ. 2	2,57,582.00
3	ಸಹಕಾರ ಶಿಕ್ಷಣ ನಿಧಿ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ	ಶೇ. 1	1,28,791.00
4	ಕಟ್ಟಡ ನಿಧಿ	ಶೇ. 15	18,73,908.00
5	ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ	ಶೇ. 1	1,24,927.00
6	ಹೂಡಿಕೆಗಳ ಏರಿಳಿತ ನಿಧಿ	ಶೇ. 5	6,24,636.00
7	ಸದಸ್ಯರ ಮರಣೋತ್ತರ ನಿಧಿ	ಶೇ. 2	2,49,854.00
8	ಲಾಭಾಂಶ / ಡಿವಿಡೆಂಡ್	ಶೇ. 14	95,30,688.00
9	ಉಳಿಕೆ ಮೊತ್ತ ಕಾಯ್ದಿಟ್ಟ ನಿಧಿಗೆ		88,709.48
	ಒಟ್ಟು		**1,71,72,126.48**

ವಿಷಯ 6: 2017-18ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚಿನ ವಿವರಗಳು ವರದಿಯ ಪುಟ ಸಂ.36-38 ರಲ್ಲಿ ನೀಡಲಾಗಿದ್ದು. ಅದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಮಂಜುನಾಥ್‌ರವರು ಅಂಗೀಕರಸಬಹುದೆಂದು ಸೂಚಿಸಿದರು. ಶ್ರೀ ಬಸವೇಗೌಡರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2017-18ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚಿಗೆ ಒಪ್ಪಿಗೆ ನೀಡಿತು.

ವಿಷಯ 7: 2019-20ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು 2019-20ನೇ ಸಾಲಿನ ಅಂದಾಜು ಆಯವ್ಯಯದ ವಿವರಗಳನ್ನು ಸಭೆಗೆ ಮಂಡಿಸಿ ಮಾತನಾಡುತ್ತಾ, ಆಯವ್ಯಯದ ವಿವರಗಳನ್ನು ಪುಟ ಸಂ.36-38 ರಲ್ಲಿ ನೀಡಿದ್ದು ಇದಕ್ಕೆ ಸದಸ್ಯರುಗಳು ಒಪ್ಪಿಗೆ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಲಕ್ಕಣ್ಣರವರು 2019-20ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಅಂಗೀಕರಿಸಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ಬಸವೇಗೌಡರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2019-20ನೇ ಸಾಲಿನ ಅಂದಾಜು ಆಯವ್ಯಯವನ್ನು ಅಂಗೀಕರಿಸಿತು.

ವಿಷಯ 8: 2018-19ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಮಾಡುವುದು.

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ ಮಾತನಾಡುತ್ತಾ ಬ್ಯಾಂಕಿನ 2018-19ನೇ ಸಾಲಿನ ಲೆಕ್ಕಪರಿಶೋಧಕರ ಆಯ್ಕೆಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ನೋಂದಾಯಿಸಿರುವ ಚಾರ್ಟರ್ಡ್ ಅಕೌಂಟೆಂಟ್‌ರವರ ಪಟ್ಟಿಯಿಂದ 3 ಜನರನ್ನು ಆರಿಸಿದ್ದು, ಈ 3 ಜನರಲ್ಲಿ ಆಡಳಿತ ಮಂಡಳಿಯು ಮೆಸರ್ಸ್ ಎಸ್.ಆರ್.ಅರ್.ಕೆ. ಶರ್ಮಾ ಅಸೋಸಿಯೇಟ್ಸ್ ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ಆಯ್ಕೆ ಮಾಡಿದ್ದು, ಸರ್ವಸದಸ್ಯರ ಸಭೆಯು ಇವರನ್ನು ನೇಮಕ ಮಾಡಲು ಹಾಗೂ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆ ನೀಡಲು ಅನುಮೋದನೆ ಕೋರಿದರು.

ಸದಸ್ಯರಾದ ಶ್ರೀ ಕೃಷ್ಣರವರು 2018-19ನೇ ಸಾಲಿನ ಲೆಕ್ಕಪರಿಶೋಧನೆಗೆ ಮೆಸರ್ಸ್ ಎಸ್.ಆರ್.ಆರ್.ಕೆ. ಶರ್ಮಾ ಅಸೋಸಿಯೇಟ್ಸ್ ಚಾರ್ಟರ್ಡ್ ಅಕೌಂಟೆಂಟ್ಸ್ ಇವರನ್ನು ನೇಮಕ ಮಾಡಲು ಹಾಗೂ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆ ನೀಡುವ ಮೇರೆಗೆ ಆಡಳಿತ ಮಂಡಳಿಯು ತೆಗೆದುಕೊಂಡಿರುವ ತೀರ್ಮಾನವನ್ನು ಅಂಗೀಕರಿಸಬಹುದೆಂದು ಸೂಚಿಸಿದರು. ಶ್ರೀ ಗೋವಿಂದ ರೆಡ್ಡಿರವರು ಇದನ್ನು ಒಪ್ಪಬಹುದೆಂದು ಅನುಮೋದಿಸಿದರು. ನಂತರ ಸಭೆಯು 2018-19ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮಾಡಲು ಮೆಸರ್ಸ್ ಎಸ್.ಆರ್.ಆರ್.ಕೆ. ಶರ್ಮಾ ಅಸೋಸಿಯೇಟ್ಸ್ ಚಾರ್ಟರ್ಡ್ ಅಕೌಂಟೆಂಟ್ಸ್ ರವರನ್ನು ಆಯ್ಕೆ ಮಾಡಿರುವುದಕ್ಕೆ ಹಾಗೂ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆ ನೀಡಲು ಸರ್ವಸದಸ್ಯರ ಸಭೆಯು ಒಪ್ಪಿಗೆ ನೀಡಿತು.

ವಿಷಯ 9: ಕರ್ನಾಟಕ ಸಹಕಾರ ಕಾಯಿದೆ, ನಿಯಮಗಳ ಅನುಸಾರವಾಗಿ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾತಿದ್ದುಪಡಿಯನ್ನು ಅನುಮೋದಿಸುವುದು.

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಕಾಯಿದೆ ಮತ್ತು ನಿಯಮಗಳಿಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದು ಬ್ಯಾಂಕು ಕಡ್ಡಾಯವಾಗಿ ಇದನ್ನು ಬ್ಯಾಂಕಿನ ಬೈಲಾದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಈ ಕಾರಣದಿಂದಾಗಿ ಬ್ಯಾಂಕಿನ ಬೈಲಾಗಳಿಗೆ ತಿದ್ದುಪಡಿಗಳನ್ನು ವರದಿಯ ಪುಟ ಸಂ 41-42ರಲ್ಲಿ ವಿವರಿಸಿದ್ದು, ಮಾನ್ಯ ಸದಸ್ಯರುಗಳು ಇದನ್ನು ಅಂಗೀಕರಿಸಬೇಕೆಂದರು. ಸದಸ್ಯರಾದ ಶ್ರೀ ನಂಜುಂಡಪ್ಪನವರು ಬೈಲಾ ತಿದ್ದುಪಡಿಯನ್ನು ಅಂಗೀಕರಿಸಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ಟಿ. ನಾರಾಯಣಪ್ಪನವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು ಬೈಲಾ ತಿದ್ದುಪಡಿಗಳಿಗೆ ಅಂಗೀಕಾರ ನೀಡಿತು.

ವಿಷಯ 10 : ಬ್ಯಾಂಕಿನ ಅಧಿಕೃತ ಷೇರು ಬಂಡವಾಳ ಹಾಲಿ ಇರುವ, ರೂ.10 ಕೋಟಿಗಳಿಂದ ರೂ.15 ಕೋಟಿಗಳಿಗೆ ಹೆಚ್ಚಿಸುವ ಬಗ್ಗೆ ಪರಿಶೀಲನೆ ಮತ್ತು ಅನುಮೋದನೆ.

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್ ರವರು ಮಾತನಾಡುತ್ತಾ ಬ್ಯಾಂಕಿನ ಅಧಿಕೃತ ಷೇರು ಬಂಡವಾಳವು ಹಾಲಿ ರೂ.10 ಕೋಟಿಗೆ ಸೀಮಿತವಾಗಿದ್ದು ದಿನಾಂಕ : 31.03.2018ರ ಅಂತ್ಯಕ್ಕೆ ಬ್ಯಾಂಕಿನ ಸಂದಾಯವಾದ ಷೇರು ಬಂಡವಾಳದ ಮೊತ್ತವು ರೂ.8.59 ಕೋಟಿಗಳಾಗಿರುತ್ತದೆ. ಈಗ ಮಂಜೂರಾದ ಸಾಲಗಳಿಗೆ ಹೆಚ್ಚುವರಿ ಷೇರುಗಳನ್ನು ಸಾಲಗಾರರಿಂದ

ಪಡೆಯುತ್ತಿರುವುದರಿಂದ 31.03.2018ರ ಅಂತ್ಯದೊಳಗೆ ಅಧಿಕೃತ ಷೇರು ಬಂಡವಾಳವು ಮಿತಿ ಮೀರುವ ಸಾಧ್ಯತೆಯು ಇರುವುದರಿಂದ ಪೂರ್ವಭಾವಿಯಾಗಿ ಷೇರು ಬಂಡವಾಳದ ಮಿತಿಯನ್ನು ರೂ.15 ಕೋಟಿಗಳಿಗೆ ಹೆಚ್ಚಿಸಲು ಒಪ್ಪಿಗೆ ನೀಡಬೇಕೆಂದು ಮಹಾಸಭೆಗೆ ಕೋರಿದರು.

ಸದಸ್ಯರಾದ ಶ್ರೀ ನಾಗರಾಜುರವರು ಅಧಿಕೃತ ಷೇರು ಬಂಡವಾಳವನ್ನು ರೂ.15 ಕೋಟಿಗಳಿಗೆ ಹೆಚ್ಚಿಸಬಹುದೆಂದು ಸೂಚಿಸಿದರು. ಶ್ರೀ ನವೀನ್ ಕುಮಾರ್‌ರವರು ಇದನ್ನು ಒಪ್ಪಬಹುದೆಂದು ಅನುಮೋದಿಸಿದರು. ನಂತರ ಸಭೆಯು ಅಧಿಕೃತ ಷೇರು ಬಂಡವಾಳವನ್ನು ರೂ.15 ಕೋಟಿಗಳಿಗೆ ಹೆಚ್ಚಿಸಬಹುದೆಂದು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ವಿಷಯ 11 : 2018-19ನೇ ಸಾಲಿನ ಕಾರ್ಯಕ್ರಮದ ಪರಿಗಣನೆ

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್ ರವರು ಮಾತನಾಡುತ್ತಾ ಬ್ಯಾಂಕು 2018-19ನೇ ಸಾಲಿನಲ್ಲಿ ಬ್ಯಾಂಕಿನ ಪ್ರಗತಿಗಾಗಿ ಹಾಗೂ ಸದಸ್ಯರುಗಳ ಸಲಹೆ/ಸೂಚನೆಗೆ ಸಂಬಂಧಿಸಿದಂತೆ ಕೈಗೊಂಡ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಕಾರ್ಯಯೋಜನೆಗಳನ್ನು ರೂ ಸಲಾಗಿದ್ದು ಇವುಗಳನ್ನು ಸಭೆಗೆ ವಿವರಿಸಿದರು.

1) ಠೇವಣಿ ಮತ್ತು ಸಾಲಗಳ ಅನುಪಾತ (CD Ratio) ವನ್ನು ಶೇ.70 ರಷ್ಟು ಸಾಧಿಸುವುದು.
2) ಒಟ್ಟು ವಹಿವಾಟು (Total Business) ಅನ್ನು ಕನಿಷ್ಟ ಶೇ.25 ರಷ್ಟು ಪ್ರಗತಿ ಸಾಧಿಸುವುದು.
3) ಒಟ್ಟು ಎನ್. .ಎ. ಪ್ರಮಾಣವನ್ನು ಶೇ. 3 ಕ್ಕಿಂತ ಕಡಿಮೆಗೆ ತರುವುದು.
4) ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಅನುಷ್ಠಾನಕ್ಕೆ ತರುವುದು.
5) ಸದಸ್ಯರು/ಗ್ರಾಹಕರು ಅಂತರ್ಜಾಲ (Internet) ಮೂಲಕ ಬಿಲ್‌ಗಳು ಮತ್ತು ಇತರೆ ಖರ್ಚುಗಳನ್ನು ಪಾವತಿಸಲು ಮತ್ತು ನಗದು ಪಡೆಯಲು ATM Card (Rupay Card) ವಿತರಿಸುವಿಕೆಯನ್ನು ಅನುಷ್ಠಾನಗೊಳಿಸುವುದು.

ವಿಷಯ 12 : ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಬ್ಯಾಂಕಿನ ನಿರ್ದೇಶಕರುಗಳಿಂದ ಮತ್ತು ಸದಸ್ಯರುಗಳಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಮಾತನಾಡುತ್ತಾ ಬೈಲಾ ಸಂಖ್ಯೆ 20.1ರಂತೆ ಕನಿಷ್ಠ ಸೇವೆಗಳನ್ನು ಎಲ್ಲಾ ನಿರ್ದೇಶಕರುಗಳು ಬಳಸಿಕೊಂಡಿರುತ್ತಾರೆ ಹಾಗೂ ಸದಸ್ಯರುಗಳು ಕನಿಷ್ಠ ಸೇವೆಗಳನ್ನು ಕಡ್ಡಾಯವಾಗಿ ಬಳಸಿಕೊಳ್ಳಲು ವಾರ್ಷಿಕ ವರದಿಯಲ್ಲಿ ಹಾಗೂ ಪತ್ರ ಮುಖೇನ ತಿಳಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ವಿಷಯ 13 : ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ ನಿರ್ದೇಶಕರು ಹಾಗೂ ಇವರ ಸಂಬಂಧಿಕರಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

ಶಾಖಾ ವ್ಯವಸ್ಥಾಪಕರುಗಳಿಗೆ ಸನ್ಮಾನ

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ 2017–18ನೇ ಸಾಲಿನಲ್ಲಿ ಶಾಖೆಯ ಅಭಿವೃದ್ಧಿಗೆ ಹೆಚ್ಚಿನ ಪರಿಶ್ರಮ ನೀಡಿದ ಹಾಗೂ ಅಭಿವೃದ್ಧಿ ಮಾಡಿದ ಶಾಖಾ ವ್ಯವಸ್ಥಾಪಕರುಗಳಿಗೆ ಆಡಳಿತ ಮಂಡಳಿಯು ದಿನಾಂಕ 23.09.2018ರಂದು ನಡೆಯಲಿರುವ ಸರ್ವಸದಸ್ಯರ ಸಭೆಯಲ್ಲಿ ಸನ್ಮಾನ ಮಾಡಬೇಕೆಂದು ತೀರ್ಮಾನಿಸಿದ್ದು ಅದರಂತೆ ಮತ್ತೀಕೆರೆ ಶಾಖೆ ಹಾಗೂ ಯಲಹಂಕ ಶಾಖೆಯು ಈ ದಿಶೆಯಲ್ಲಿ ಹೆಚ್ಚಿನ ಸಾಧನೆ ಮಾಡಿದ ಕಾರಣದಿಂದಾಗಿ ಶಾಖಾ ವ್ಯವಸ್ಥಾಪಕರುಗಳಾದ ಶ್ರೀ ಗಂಗರಂಗಯ್ಯ ಮತ್ತು ಶ್ರೀ ಎಸ್.ಆರ್. ಮುನಿಸ್ವಾಮಿಗೌಡರವರಿಗೆ ಸನ್ಮಾನ ಮಾಡಲಾಯಿತು.

ಪ್ರತಿಭಾ ಪುರಸ್ಕಾರ :–

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡಿ ಕಳೆದ ಏ್ರಲ್ ತಿಂಗಳಿನಲ್ಲಿ ನಡೆದ ದ್ವಿತೀಯ .ಯು.ಸಿ. ಹಾಗೂ ಪದವಿ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಶೇ.85ರಷ್ಟು ಹಾಗೂ ಅದಕ್ಕಿಂತ ಹೆಚ್ಚಿಗೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ರಾಷ್ಟಮಟ್ಟದಲ್ಲಿ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ರೂ.5000/- ಗಳನ್ನು ನೀಡಲು ತೀರ್ಮಾನಿಸಲಾಗಿದೆಯೆಂದು ತಿಳಿಸಿದರು.

ಕಾರ್ಯದರ್ಶಿಯವರಾದ ಶ್ರೀಮತಿ ಡಿ.ಎ. ಅಮೃತರವರು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹೆಸರುಗಳನ್ನು ಸರ್ವಸದಸ್ಯರ ಸಭೆಯಲ್ಲಿ ಪ್ರಕಟಿಸಿದರು. ಮಾನ್ಯ ಉಪಾಧ್ಯಕ್ಷರು ಹಾಗೂ ಹಿರಿಯ ಆಡಳಿತ ಮಂಡಳಿ ಸದಸ್ಯರುಗಳು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಅಭಿನಂದಿಸಿದರು.

ವಿಷಯ 14 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ವಸೂಲಿಗೆ ಕಷ್ಟಕರವಾಗಿರುವ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ತೀರ್ಮಾನ.

ಸಭಾಧ್ಯಕ್ಷರಾದ ಡಾ: ಎಂ.ಸಿ. ಜಗತ್‌ರವರು ಮಾತನಾಡುತ್ತಾ ನಿಧನರಾದ 61 ಸಾಲಗಾರರ ಸಾಲಗಳನ್ನು ಮನ್ನಾ ಮಾಡಲು ಸದಸ್ಯರ ಒ್ಪಗೆ ಪಡೆಯಲು ವಾರ್ಷಿಕ ಮಹಾ ಸಭೆಯ ಮುಂದೆ

ತಂದಿರುತ್ತದೆ. ಬ್ಯಾಂಕು ಇಲ್ಲಿಯವರೆವಿಗೂ 20 ಸಾಲಗಳನ್ನು ಮನ್ನಾ ಮಾಡಲಾಗಿದೆ. ಈಗ ಮನ್ನಾ ಮಾಡಲು ಉದ್ದೇಶಿಸಿರುವ ಸಾಲಗಳಲ್ಲಿ ಸಾಲಗಾರರು ಮತ್ತು ಜಾಮೀನುದಾರರು ನಿಧನ ಹೊಂದಿದ್ದು, ಸಂಬಂಧಿಸಿದ ವಾರಸುದಾರರು ನಾಪತ್ತೆಯಾಗಿರುತ್ತಾರೆ. ಸಾಲಗಾರರು ಮತ್ತು ಜಾಮೀನುದಾರರು ನಾಪತ್ತೆಯಾಗಿರುತ್ತಾರೆ. ಇವರುಗಳನ್ನು ಪತ್ತೆ ಹಚ್ಚಲು ತೀವ್ರ ಕ್ರಮಕೈಗೊಂಡರೂ ಪತ್ತೆ ಮಾಡಲು ಸಾಧ್ಯವಾಗಿರುವುದಿಲ್ಲ. ಸಾಲಗಾರರು ಪಡೆದ ಸಾಲದ ಮೊತ್ತ ರೂ. 50000/– ಗಳಿಗಿಂತ ಕಡಿಮೆ ಇದ್ದು ಸಾಲ ಮರುಪಾವತಿಯು ಕಷ್ಟಕರವಾಗಿರುತ್ತದೆ. ಈ ರೀತಿಯ ಖಾತೆಗಳನ್ನು ಉಳಿಸಿಕೊಂಡು ಹೋದಲ್ಲಿ ಬಡ್ಡಿಯೂ ಹೆಚ್ಚುತ್ತಾ ಹೋಗುತ್ತದೆಯೆ ಹೊರತು ಸಾಲ ವಸೂಲಾಗುವುದಿಲ್ಲ. ನಮಗೂ ಜವಾಬ್ದಾರಿ ಇದ್ದು, ವಸೂಲಾಗುವಂತಹ ಸಾಲಗಳನ್ನು ಮನ್ನಾ ಮಾಡಲು ಬಯಸುವುದಿಲ್ಲ ಹಾಗೂ ನಾವು ಸಾಲವನ್ನು ಮನ್ನಾ ಮಾಡಿದರೂ ಅಂತಹ ಸಾಲಗಾರರ ವಿರುದ್ಧ ವಸೂಲಾತಿ ಕ್ರಮಕೈಗೊಳ್ಳುತ್ತೇವೆ. ಈ ಸಾಲಗಳನ್ನು ಬ್ಯಾಂಕಿನ ನಿರ್ದೇಶಕರು/ಸಿಬ್ಬಂದಿಗಳು ಶಿಫಾರಸ್ಸು ಮಾಡಿರುವುದಿಲ್ಲ. ಈ ಮೇಲ್ಕಂಡ ಅಂಶಗಳನ್ನು ಮಾನ್ಯ ಸದಸ್ಯರುಗಳು ಪರಿಶೀಲಿಸಿ 61 ಸಾಲಗಳನ್ನು ಮನ್ನಾ ಮಾಡಲು ಒಪ್ಪಿಗೆ ನೀಡಬೇಕೆಂದು ಮಹಾಸಭೆಗೆ ಕೋರಿದರು.

ಶ್ರೀ ನಂಜುಂಡಪ್ಪನವರು ಮಾತನಾಡುತ್ತಾ ಸಾಲ ಮನ್ನಾ ಬಳಸುವ ಹಣವು ಸದಸ್ಯರುಗಳಿಗೆ ಸೇರಿದ್ದು, ಸದಸ್ಯರ ಹಣವನ್ನು ಉಪಯೋಗಿಸಿ ನೀವು ಸಾಲ ಮನ್ನಾ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ. ಇಷ್ಟು ವರ್ಷಗಳಾದರು ಸಾಲ ಏಕೆ ವಸೂಲು ಮಾಡಿಲ್ಲ. ಈ ಸಾಲಗಳನ್ನು ಯಾವ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೋ ಅವರಿಂದ ವಸೂಲಿ ಮಾಡಿ. ತೀವ್ರ ವಸೂಲಾತಿ ಕ್ರಮಕೈಗೊಂಡು ವಸೂಲಿ ಮಾಡಲು ಪ್ರಯತ್ನಿಸುವುದನ್ನು ಬಿಟ್ಟು ಸಾಲ ಮನ್ನಾ ಮಾಡುವುದು ಸರಿಯಲ್ಲ. ಹಾಗೂ ಸಾಲ ಮನ್ನಾ ಮಾಡುವ ವಿಚಾರವನ್ನು ಈ ಸಭೆಯಲ್ಲಿ ಪರಿಶೀಲನೆಗೆ ತೆಗೆದುಕೊಳ್ಳುವುದು ಬೇಡ ಎಂದರು.

ಪ್ರೋ. ಟಿ. ನಾರಾಯಣಪ್ಪನವರು ಮಾತನಾಡುತ್ತಾ ವಸೂಲಾತಿಯು ಕಷ್ಟಕರವಾಗಿರುವ ಸಾಲಗಳನ್ನು ಮನ್ನಾ ಮಾಡಲು ಸಲುವಾಗಿಯೇ ಕರಡು ಮತ್ತು ಅನುಮಾನಾಸ್ಪದ ಸಾಲಗಳ ನಿಧಿಯಿದ್ದು, ಈ ನಿಧಿಯಲ್ಲಿ ರೂ. 9.70 ಕೋಟಿ ಮೊತ್ತವಿರುತ್ತದೆ. ಇದು ಕಾನೂನು ಬದ್ಧ ಹಣವಾಗಿರುತ್ತದೆ. ಸಾಲಗಾರರು ಸಾಲ ಪಡೆದು ವಸೂಲಿಯಾಗದಂತಹ ಸಂದರ್ಭದಲ್ಲಿ ಈ ಖಾತೆಯಿಂದ ಹಣ ಖರ್ಚು ಹಾಕಿ ಸಾಲಗಳನ್ನು ಮುಕ್ತಾಯ ಮಾಡಬಹುದು. 2000ನೇ ಇಸವಿಯಲ್ಲಿ ಸಾಲವನ್ನು ಪಡೆದ ಸಾಲಗಾರರು 18 ವರ್ಷಗಳ ನಂತರವು ಸಾಲವನ್ನು ಮುಕ್ತಾಯ ಮಾಡದಿರುವಾಗ ಇನ್ನೂ ಮುಂದೆ ಸಾಲವನ್ನು ಮುಕ್ತಾಯ ಮಾಡಲು ಸಾಧ್ಯವಿಲ್ಲ. ಸಾಲ ಮನ್ನಾ ಮಾಡಲು Provision

ಇದ್ದು, ಸಾಲ ಮನ್ನಾ ಮಾಡಬಹುದು. ಈ ಸಾಲವನ್ನು ಶಿಫಾರಸ್ಸು ಮಾಡಿದವರಿಂದ ವಸೂಲಿ ಮಾಡಬೇಕೆಂದು ಕೆಲವು ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದು ಇದು ಸರಿಯಲ್ಲ. ಒಂದು ಸಂಸ್ಥೆಯಲ್ಲಿ ಹಲವು ಸಮಿತಿಗಳಿರುತ್ತವೆ ಹಾಗೂ ಈ ಸಮಿತಿಗಳಿಗೆ ನಿರ್ದೇಶಕರುಗಳನ್ನು ಆರಿಸಿರುತ್ತಾರೆ. ಸದಸ್ಯರುಗಳು ಸಾಲಕ್ಕಾಗಿ ಅರ್ಜಿ ಸಲ್ಲಿಸಿದಾಗ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಸಾಲದ ಅರ್ಜಿಗಳನ್ನು ಪರಿಶೀಲಿಸಿ ಸಾಲದ ಉಪಸಮಿತಿ ಮುಂದೆ ಇಡುತ್ತಾರೆ. ಸಾಲದ ಉಪಸಮಿತಿ ಸದಸ್ಯರು ಕಾರ್ಯದರ್ಶಿಯವರ ಹಾಗೂ ಅಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಆಡಳಿತ ಮಂಡಳಿ ಸಾಲ ಮಂಜೂರು ಮಾಡಿರುತ್ತೆ. ಸಾಲ ಮಂಜೂರಾಗುವ ಸಮಯದಲ್ಲಿ ಸಾಲಗಾರರು ನೀಡುವ ದಾಖಲಾತಿಗಳು ಸರಿಯಾಗಿರುತ್ತದೆ. ಕಾಲಕ್ರಮೇಣ ಸಾಲಗಾರರ ಸ್ಥಿತಿಗತಿಗಳಲ್ಲಿ ಹೆಚ್ಚುಕಡಿಮೆಯಾಗಿ ಸಾಲ ಮರುಪಾವತಿ ಮಾಡಲಾಗದಂತಹ ಸ್ಥಿತಿ ತಲು ದರೆ ಇದಕ್ಕೆ ಸಾಲ ಮಂಜೂರು ಮಾಡಿದ ನಿರ್ದೇಶಕರು ಜವಾಬ್ದಾರರಾಗುವುದಿಲ್ಲ.

ಪ್ರೋ. ಕೃಷ್ಣೇಗೌಡರವರು ಮಾತನಾಡುತ್ತಾ, ಸಾಲ ಮನ್ನಾ ಮಾಡಲು ಬೈಲಾದಲ್ಲಿ ಅವಕಾಶವಿಲ್ಲದಿರುವುದನ್ನು ಗಮನಿಸಿರುತ್ತೇನೆ. ಬೈಲಾದಲ್ಲಿ ಅವಕಾಶವಿಲ್ಲದಿರುವಾಗ ಸರ್ವಸದಸ್ಯರ ಸಭೆಯಲ್ಲಿ ಮನ್ನಾ ಮಾಡುವ ವಿಷಯವನ್ನು ತಂದು ಒಪ್ಪಿಗೆ ಪಡೆಯುವುದು ಬೇಡ. ಸಾಲ ಮನ್ನಾ ಮಾಡಲು ಬೈಲಾದಲ್ಲಿ ಅವಕಾಶವಿದೆ ಎಂಬುದನ್ನು ಅಧ್ಯಕ್ಷರು ಸ್ಪಷ್ಟಪಡಿಸಲಿ, ಸಾಲ ಮನ್ನಾ ಮಾಡುವ ವಿಚಾರವನ್ನು ಕ್ರಮಬದ್ಧವಾಗಿ ಮಾಡಿ ಮುಂದಿನ ಸರ್ವಸದಸ್ಯರ ಮುಂದೆ ತನ್ನಿ ಇಲ್ಲವಾದರೆ ತೊಂದರೆಗಳಾಗುತ್ತವೆ. ಕರಡು ಮತ್ತು ಅನುಮಾನಾಸ್ಪದ ನಿಧಿಯಿಂದ ಸಾಲ ಮನ್ನಾ ಮಾಡಬಹುದು ಎಂಬುದು ಯಾವ ಬೈಲಾದಲ್ಲಾಗಲಿ, ಆಕ್ಟ್ ನಲ್ಲಾಗಲಿ ಇಲ್ಲದಿರುವಾಗ ಬೈಲಾ ಮತ್ತು ಆಕ್ಟ್ ಅನ್ನು ಬಿಟ್ಟು ಸರ್ವಸದಸ್ಯರ ಮುಂದೆ ತಂದಿರುವುದು ಸರಿಯಲ್ಲ. ಸಾಲ ಮನ್ನಾ ಮಾಡುವ ಬಗ್ಗೆ ಪೂರ್ವಾಪರಗಳನ್ನು ಯೋಚಿಸಿ ಸಾಲ ಮನ್ನಾ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ತೊಂದರೆಗಳಾದಲ್ಲಿ ಆಡಳಿತ ಮಂಡಳಿ ಸದಸ್ಯರೇ ಹೊಣೆಗಾರರಾಗುತ್ತಾರೆ. ಆಡಿಟರ್ ರವರು ಸಾಲ ಮನ್ನಾ ಮಾಡಲು ಪೂರ್ಣ ಪ್ರಮಾಣದಲ್ಲಿ ಒಪ್ಪಿಗೆ ನೀಡಿಲ್ಲ ಹಾಗೂ ಕ್ರಮವಾಗಿ ಬರೆದಿರುವುದಿಲ್ಲ. ಸದಸ್ಯರುಗಳಿಗೆ ಪೂರ್ಣಪ್ರಮಾಣದ ಮಾಹಿತಿ ನೀಡಿ ಸಾಲ ಮನ್ನಾ ಮಾಡಲು ನನ್ನ ವಿರೋಧವಿರುವುದಿಲ್ಲ ಆದರೆ ಕ್ರಮಬದ್ಧವಾಗಿ ಮಾಡಬೇಕು.

ಸಭಾಧ್ಯಕ್ಷರಾದ ಡಾಃ ಎಂ.ಸಿ.ಜಗತ್ ರವರು ಮಾತನಾಡುತ್ತಾ, ಸಾಲ ಮನ್ನಾ ಮಾಡಲು ಬ್ಯಾಂಕಿನ ಬೈಲಾದಲ್ಲಿ ಅವಕಾಶವಿದ್ದು, ಬೈಲಾ ಪುಸ್ತಕದ ಪುಟ ಸಂಖ್ಯೆ 68 ರಲ್ಲಿ ಬೈಲಾ ಸಂಖ್ಯೆ 87.1ರಲ್ಲಿ ಅವಕಾಶವಿರುತ್ತದೆ. RBI ನಿರ್ದೇಶನಗಳಲ್ಲಿಯೂ ಸಹ ಮನ್ನಾ ಮಾಡುವ ಬಗ್ಗೆ ಉಲ್ಲೇಖವಿರುತ್ತದೆ.

ಸಾಲ ಮನ್ನಾ ಮಾಡಿದ ನಂತರವೂ ಸಾಲ ವಸೂಲಾತಿಗೆ ಗಮನ ನೀಡುತ್ತೇವೆ.

ಶ್ರೀ ಜಿ. ಕೃಷ್ಣಪ್ಪನವರು ಮಾತನಾಡುತ್ತಾ, ಸಾಲ ಮನ್ನಾ ಮಾಡುವ ವಿಚಾರದಲ್ಲಿ ನನಗೆ ಒಪ್ಪಿಗೆ ಇದೆ. ಸಾಲಗಾರರು ಮತ್ತು ಜಾಮೀನುದಾರರು ನಾಪತ್ತೆಯಾಗಿದ್ದಾರೆಂದು ತಿಳಿಸಿದ್ದು, ವಿಳಾಸವಿಲ್ಲದವರಿಗೆ ಮತ್ತು ID Proof ಪಡೆಯದೆ ಸಾಲ ನೀಡಿರುವುದು ತಪ್ಪು. 2000ನೇ ಇಸವಿಯಲ್ಲಿ ರೂ 50000/– ಗಳನ್ನು ಪಡೆದಿದ್ದು ಈಗ ಮರುಪಾವತಿಸುವ ಮೊತ್ತ ರೂ. 1,79,000/–ಗಳಾಗಿದ್ದು, ಸಿಬ್ಬಂದಿಗಳಾಗಲಿ, ನಿರ್ದೇಶಕರುಗಳಾಗಲಿ ಸಾಲ ಕಟ್ಟುವಂತೆ ವಿನಂತಿಸಿಕೊಂಡರೂ ಅವರು ಕಟ್ಟುವುದಿಲ್ಲ, 2000 ನೇ ಇಸವಿಯಲ್ಲಿ ಸಾಲ ನೀಡಿ ಇಲ್ಲಿಯವರೆವಿಗೂ ವಸೂಲಿ ಮಾಡದಿರುವುದು ಆಡಳಿತ ಮಂಡಳಿಯ ವೈಫಲ್ಯ ಮತ್ತು ಸಮರ್ಪಕವಾಗಿ ಕೆಲಸ ಮಾಡದಿರುವುದನ್ನು ತೋರಿಸುತ್ತದೆ. ಈ ಸಾಲಗಳು ವಸೂಲಾಗುವುದಿಲ್ಲ ಹಾಗೂ NPA ಆಗಿ ತೋರಿಸುತ್ತದೆ. ಆದುದರಿಂದ ಸಾಲ ಮನ್ನಾ ಮಾಡುವುದು ಒಳ್ಳೆಯದು, ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿದರು.

ಶ್ರೀ ಲಿಂಗಪ್ಪನವರು ಮಾತನಾಡುತ್ತಾ, ಸಾಲ ಮನ್ನಾ ಮಾಡಲು ಬ್ಯಾಂಕಿನ ಬೈಲಾದಲ್ಲಿ ಹಾಗೂ RBI ನಿರ್ದೇಶನಗಳಲ್ಲಿ ಅವಕಾಶವಿದೆ ಎಂದು ಸಭಾಧ್ಯಕ್ಷರು ತಿಳಿಸಿರುವುದರಿಂದ ಸಾಲ ಮನ್ನಾ ಮಾಡಬಹುದು ಎಂದರು.

ಉಪಾಧ್ಯರಾದ ಡಾಃ ಎಂ. ವೀರಪ್ಪನವರು ಮಾತನಾಡುತ್ತಾ, ಆಡಳಿತ ಮಂಡಳಿಯು ಮನ್ನಾ ಮಾಡಲು ಉದ್ದೇಶಿಸಿರುವ ಸಾಲಗಳಲ್ಲಿ ಸಾಲಗಾರರು ಮತ್ತು ಜಾಮೀನುದಾರರು ಮರಣ ಹೊಂದಿರುತ್ತಾರೆ ಕೆಲವರು ನಾಪತ್ತೆಯಾಗಿರುತ್ತಾರೆ. 3 ವರ್ಷದ ಹಿಂದೆ ಸಾಲ ಮನ್ನಾ ಮಾಡುವ ಪ್ರಸ್ತಾವನೆಯನ್ನು ಸರ್ವಸದಸ್ಯರ ಸಭೆ ಮುಂದೆ ತಂದಾಗ ಪ್ರೋ. ಕೃಷ್ಣೇಗೌಡರವರು ವಿರೋದ ವ್ಯಕ್ತಪಡಿಸಿದ್ದರು. ಆಡಳಿತ ಮಂಡಳಿಗೆ ಸಹ ಸಾಲ ಮನ್ನಾ ಮಾಡಲು ಇಷ್ಟವಿಲ್ಲ. ಈ ರೀತಿ ಸಾಲ ಮನ್ನಾ ಮಾಡಿದ್ದಲ್ಲಿ ಕ್ರಮವಾಗಿ ಸಾಲವನ್ನು ಮರುಪಾವತಿಸುವ ಸಾಲಗಾರರು ಸಹ ಪಾವತಿಸುವುದನ್ನು ನಿಲ್ಲಿಸಬಹುದು ಎಂದು ಭಾವಿಸಿ ಆ ಸಾಲಿನಲ್ಲಿ ಸಾಲ ಮನ್ನಾ ಮಾಡದೆ ವಸೂಲಾತಿ ಕ್ರಮಕೈಗೊಂಡು 35 ಸಾಲಗಳನ್ನು ಮುಕ್ತಾಯ ಮಾಡಿದ್ದೇವೆ. ಸಾಲ ಮನ್ನಾ ಮಾಡಲು ಉದ್ದೇಶಿಸಿರುವ ಸಾಲಗಳು 2000 ನೇ ಇಸವಿಯಿಂದ ಮುಂದುವರೆದುಕೊಂಡು ಬಂದಿರುತ್ತವೆ. ಅಂದು ಸಾಲಗಾರರು ಪಡೆದ ರೂ. 10000/– ಗಳು ಈಗ ಬಡ್ಡಿ ಸೇರಿ ರೂ. 1 ಲಕ್ಷದವರೆವಿಗೂ ಮುಟ್ಟಿರುತ್ತದೆ. ಕರಡು ಮತ್ತು ಅನುಮಾನಾಸ್ಪದ ಸಾಲದ ನಿಧಿಯಲ್ಲಿ 9.70 ಕೋಟಿಗಳಷ್ಟು ಹಣವಿದ್ದು

2016–17ನೇ ಸಾಲಿನಲ್ಲಿ ಬಿಟ್ಟರೆ ಈ ಹಿಂದೆ ಸಾಲ ಮನ್ನಾ ಮಾಡಿರುವುದಿಲ್ಲ. ಆದುದರಿಂದ ಮಾನವೀಯತೆಯ ದೃಷ್ಟಿಯಿಂದ ಸದಸ್ಯರುಗಳು ಸಾಲಗಳನ್ನು ಮನ್ನಾ ಮಾಡಲು ಒಪ್ಪಿಗೆ ನೀಡಬೇಕೆಂದು ಕೋರತ್ತೇನೆ.

ಸದಸ್ಯರಾದ ಪ್ರೋ. ಟಿ. ನಾರಾಯಣಪ್ಪನವರು 61 ಸಾಲಗಾರರ ಸಾಲಗಳನ್ನು ಮನ್ನಾ ಮಾಡಬಹುದೆಂದು ಸೂಚಿಸಿದರು ಶ್ರೀ ಲಿಂಗಪ್ಪನವರು ಇದನ್ನು ಒಪ್ಪಬಹುದೆಂದು ಅನುಮೋದಿಸಿದರು. ನಂತರ ಸಭೆಯು ಸಾಲಗಳನ್ನು ಮನ್ನಾ ಮಾಡಬಹುದೆಂದು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

ವಂದನೆಗಳು :–

ಆಡಳಿತ ಮಂಡಳಿಯ ಪರವಾಗಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ವಿ. ಶ್ರೀನಿವಾಸಯ್ಯನವರು 44ನೇ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳಿಗೂ ಹಾಗೂ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೂ, ಸಹಕಾರ ಮತ್ತು ಆಡಿಟ್ ಇಲಾಖೆಯ ಅಧಿಕಾರಿಗಳಿಗೂ, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಅಪೆಕ್ಸ್ ಬ್ಯಾಂಕ್, ಸಂಘ ಸಂಸ್ಥೆಗಳು, ಎಲ್ಲಾ ಗ್ರಾಹಕರಿಗೂ ಮತ್ತು ಬ್ಯಾಂಕಿನ ಪ್ರಗತಿಗೆ ಎಲ್ಲಾ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಬ್ಯಾಂಕಿನ ಸಂಸ್ಥಾಪಕರು ಮತ್ತು ಮಾಜಿ ವಿಶೇಷ ಜಿಲ್ಲಾಧಿಕಾರಿಗಳಾದ, ಸಹಕಾರ ರತ್ನ ಶ್ರೀ ಬಿ.ಎಲ್.ಲಕ್ಕೇಗೌಡರವರಿಗೂ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು.

ಸಹಿ/–	ಸಹಿ/–
(ಶ್ರೀಮತಿ ಡಿ.ಎ. ಅಮೃತ)	(ಡಾ: ಎಂ.ಸಿ.ಜಗತ್)
ಕಾರ್ಯದರ್ಶಿ	ಸಭಾಧ್ಯಕ್ಷರು

*****